ಬೆಲೆ ರೂ.2.50

D.O.P - 15th of every month at Udupi Sorting Office


# ಶ್ರೀ ಶಾರದಾ


ಮಾಸಪತ್ರಿಕೆ – 15 ಜುಲೈ 2016


॥ ಧಿಯೋ ಯೋನಃ ಪ್ರಚೋದಯಾತ್ ॥


*Power Cut !!!???*
*Install Best Quality Inverters...*

Mobile : 9483242111
K.Suresh Rao : 9036443884
Tel : 0820-2523436



DEEPA ENTERPRISES

Business Complex, Ground Floor,
Near Telephone Exchange, Hotel Udupi Residency Road,
Udupi-576101.

Inverters, UPS, Batteries, Repairs Maintenance & Charging



Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ – 576 102. ☎ 2520754

ಸಂಪುಟ-16 ಸಂಚಿಕೆ-7 ಪುಟಗಳು-10 Registered Under No.UDP/1260/2015-2017 Licenced to Post without Prepayment WPP No. SK/WPP/UDP/81/15-17


## ಉಡುಪಿ ಸಂಘದಲ್ಲಿ ವಿಳಾಸ ಪುಸ್ತಕದ ಕಾರ್ಯಕ್ಕೆ ಚಾಲನೆ

ಉಡುಪಿ ತಾಲೂಕಿನ ನಮ್ಮ ಸಮಾಜಬಾಂಧವರ ವಿಳಾಸ ಸಹಿತ ಸಮಗ್ರ ಮಾಹಿತಿಯುಳ್ಳ ಪುಸ್ತಕವನ್ನು ಉಡುಪಿಯ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘವು ತನ್ನ ಐವತ್ತನೇ ವರ್ಷವನ್ನು ಪೂರೈಸುತ್ತಿರುವ ಸಂದರ್ಭದಲ್ಲಿ ನಮ್ಮ ಸಮಾಜಬಾಂಧವರಿಗೆ ಕೊಡುಗೆಯಾಗಿ ನೀಡಬೇಕೆಂದು ಈ ಕಾರ್ಯಕ್ರಮವನ್ನು ಐವತ್ತನೇ ವರ್ಷಾಚರಣೆಯನ್ನು ಹಮ್ಮಿಕೊಳ್ಳಲಾಗಿರುವ ಕಾರ್ಯಕ್ರಮಗಳಲ್ಲಿ ಒಂದಾಗಿ ಸೇರಿಸಿಕೊಳ್ಳಲಾಗಿದೆ. ಅನೇಕ ವರ್ಷಗಳಿಂದ ಈ ವಿಳಾಸ ಪುಸ್ತಕವನ್ನು ಹೊರತರಬೇಕೆಂದು ಸಂಘವು ಪ್ರಯತ್ನಿಸುತ್ತಿದ್ದರೂ ಈ ಆಸೆ ಪೂರೈಸಿರಲಿಲ್ಲ. ಈ ವರ್ಷ ಇದನ್ನು ಸಂಪೂರ್ಣಗೊಳಿಸಲೇಬೇಕೆಂಬ ದೃಢ ನಿಶ್ಚಯದೊಂದಿಗೆ ಶ್ರೀ ಶಾರದಾ ಪತ್ರಿಕೆಯ ಸಹಯೋಗದೊಂದಿಗೆ ಸಂಘವು ಅಡಿಯಿಟ್ಟಿದೆ. ಈ ಬಗ್ಗೆ ಶ್ರೀ ಶಾರದಾ ಪತ್ರಿಕೆಯಲ್ಲಿಯೂ ಸಮಾಜ ಬಾಂಧವರು ಸಂಘಕ್ಕೆ ಮಾಹಿತಿ ನೀಡಬೇಕಾದ ಫಾರಂ ಅನ್ನು ಪ್ರಕಟಿಸಲಾಗಿದ್ದು



ಈಗಾಗಲೆ ನೂರಾರು ಸಮಾಜಬಾಂಧವರಿಂದ ಮಾಹಿತಿಯು ನಮ್ಮ ಸಂಘದ ಕಚೇರಿಯನ್ನು ತಲುಪಿದೆ. ಈ ಕಾರ್ಯವು ಯಶಸ್ವಿಯಾಗುವಂತೆ ಶ್ರೀ ಶಾರದಾ ದೇವಸ್ಥಾನದಲ್ಲಿ ತಾ.5–7–2016ರ ಮಂಗಳವಾರದಂದು ಶ್ರೀಶಾರದೆ, ಗಣೇಶ ದೇವರ ಹಾಗೂ ಆಚಾರ್ಯ ಶ್ರೀ ಶಂಕರರ ಸನ್ನಿಧಿಯಲ್ಲಿ ಪ್ರಾರ್ಥಿಸಿ ದೀಪಬೆಳಗಿಸಿ ಈ ಕಾರ್ಯಕ್ರಮವನ್ನು ಸಾಂಕೇತಿಕವಾಗಿ ಉದ್ಘಾಟಿಸಲಾಯಿತು. ನಮ್ಮ ಸಮಾಜದ ಹಿರಿಯರಾದ ಶ್ರೀ ಎಸ್.ಎಮ್. ರಾಯರು, ಶ್ರೀ ಚಿದಂಬರ ಶ್ಯಾನುಭೋಗ್, ಶ್ರೀ ಬೆಳ್ಮಣ್ಣು ವಾಸುದೇವ ರಾಯರು, ಸಂಘದ ಅಧ್ಯಕ್ಷ ಶ್ರೀ ವೈ ಭುವನೇಂದ್ರರಾಯರು, ಕಾರ್ಯದರ್ಶಿ ಶ್ರೀ ಕೆ. ಸುರೇಶರಾಯರು, ಕೋಶಾಧಿಕಾರಿ ಶ್ರೀ ಕೆ. ಸುಧಾಕರರಾಯರು ಡಾ. ವೈ. ಸುದರ್ಶನ್ ರಾವ್, ಶ್ರೀ ಟಿ. ಜಗದೀಶ ರಾವ್, ಶ್ರೀಮತಿ ಜಯಲಕ್ಷ್ಮೀ ಎಮ್.ರಾವ್, ಡಾ.ಅಮಿತಾ, ಯುವ ವೇದಿಕೆಯ ಸದಸ್ಯರು ಮತ್ತು ಮಹಿಳಾ ವೇದಿಕೆಯ ಸದಸ್ಯರು ಉಪಸ್ಥಿತರಿದ್ದರು. ಶ್ರೀ ವೈ.ಭುವನೇಂದ್ರ ರಾವ್‌ರವರು ದೀಪ ಬೆಳಗಿಸಿ ಸಂಘದ ಈ ಯೋಜನೆ ಅತಿ ಶೀಘ್ರವೇ ನನಸಾಗಲಿ ಎಂದು ಹಾರೈಸಿದರು.

ಉಡುಪಿ ತಾಲೂಕಿನ ಸಮಾಜಬಾಂಧವರು ಶ್ರೀ ಶಾರದಾ ಪತ್ರಿಕೆಯಲ್ಲಿ ಪ್ರಕಟಿಸಲಾಗಿರುವ ಫಾರಂನ್ನು ಆದಷ್ಟು ಬೇಗನೆ ಅಧ್ಯಕ್ಷರು, ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ–576102 ಇಲ್ಲಿಗೆ ಕಳುಹಿಸಬೇಕಾಗಿ ವಿನಂತಿ. ಫಾರಂಗಳು ಶ್ರೀ ಶಾರದಾಮಂಟಪದ ಆಫೀಸಿನಲ್ಲಿಯೂ ಲಭ್ಯವಿವೆ.

## ಸುರತ್ಕಲ್ಲಿನಲ್ಲಿ ಶಂಕರ ಜಯಂತಿ ಹಾಗೂ ವಾಚನಾಲಯದ ಉದ್ಘಾಟನೆ



ತಾ. 13–05–2016 ರಂದು ಅಪರಾಹ್ನ ಸುರತ್ಕಲ್ಲಿನ ನಲಂದಾ ಸಂಕೀರ್ಣದ ಹಿಂಬದಿಯ ಕಟ್ಟಡದಲ್ಲಿ ಶ್ರೀ ವಿವೇಕಾನಂದ ಪ್ರತಿಷ್ಠಾನ ಇದರ ವತಿಯಿಂದ ಡಾ. ಬಿ. ಆರ್. ಸಾಮಗ ಹಾಗೂ ಪ್ರೊ. ದೇವರಾವ್ ಇವರಿಂದ ವಿವೇಕಾನಂದ ವಾಚನಾಲಯವನ್ನು ಉದ್ಘಾಟಿಸಲಾಯಿತು. ಸಾರ್ವಜನಿಕರಲ್ಲಿ, ಅದರಲ್ಲಿಯೂ ಮಕ್ಕಳಲ್ಲಿ ಉತ್ತಮ ಅಭಿರುಚಿಯ ಪುಸ್ತಕಗಳನ್ನು ಓದುವ ಹವ್ಯಾಸ ಬೆಳೆಸಿಕೊಳ್ಳಲು ಹಾಗೂ ಓದುಗರಿಗೆ ಗುಣಮಟ್ಟದ ಸಾಹಿತ್ಯ ಲಭ್ಯವಾಗಲೆಂಬ ಉದ್ದೇಶದಿಂದ ಈ ವಾಚನಾಲಯವನ್ನು ಸ್ಥಾಪಿಸಲಾಗಿದೆ.

ಅದೇ ದಿನ ಸ್ಥಾನಿಕ ಬ್ರಾಹ್ಮಣ ಸಂಘ, ಸುರತ್ಕಲ್‌ನ ವತಿಯಿಂದ ಶ್ರೀ ಶಂಕರ ಜಯಂತಿಯನ್ನು ಆಚರಿಸಲಾಯಿತು. ಶ್ರೀಮತಿ ಪರಿಮಳಾ ಹಾಗೂ ಶ್ರೀಮತಿ ಪ್ರಶಾಂತಿ ಇವರ ನೇತೃತ್ವದಲ್ಲಿ ಮಹಿಳಾವೇದಿಕೆಯ ಸದಸ್ಯರಿಂದ ಭಜನಾ ಕಾರ್ಯಕ್ರಮ ಹಾಗೂ ಸಾಮೂಹಿಕವಾಗಿ ಶ್ರೀ ಶ್ರೀ ಶಂಕರಾಚಾರ್ಯರ ಅಷ್ಟೋತ್ತರ ಪಾರಾಯಣ ನೆರವೇರಿತು. ನಂತರ ಬ್ರಹ್ಮಶ್ರೀ ಕೃಷ್ಣರಾಜ ಭಟ್ಟರು ಮಹಾಪೂಜೆ ನೆರವೇರಿಸಿದರು

ಈ ಕಾರ್ಯಕ್ರಮಗಳಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಕೆ. ಮಾಧವರಾವ್, ಉಪಾಧ್ಯಕ್ಷರಾದ ಶ್ರೀ ಗೋಪಾಲಕೃಷ್ಣ, ಕಾರ್ಯದರ್ಶಿಗಳಾದ ಶ್ರೀ ಪಾಲಚಂದ್ರ ಶರ್ಮ, ಶ್ರೀ ವಾಸುದೇವ ಶ್ಯಾನುಭೋಗ, ಶ್ರೀ ಪ್ರವೀಣ ಕುಮಾರ್, ಶ್ರೀ ಸುಕುಮಾರ್ ಹಾಗೂ ಮಹಿಳಾವೇದಿಕೆಯ ಅಧ್ಯಕ್ಷರಾದ ಶ್ರೀಮತಿ ಪರಿಮಳಾ ಹಾಗೂ ಪ್ರಶಾಂತಿ ಹಾಗೂ ಇತರ ಸದಸ್ಯರು ಭಾಗವಹಿಸಿದ್ದರು.

## ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು, ಉಡುಪಿ

### ಪ್ರಕಟಣೆ

ಆತ್ಮೀಯ ಸಮಾಜ ಬಾಂಧವರೇ,

ಆಗೋಸ್ಟ್ ತಿಂಗಳಲ್ಲಿ ಸಂಘದ ವತಿಯಿಂದ ಅನೇಕ ಕಾರ್ಯಕ್ರಮಗಳು ಜರಗಲಿದ್ದು, ಅವುಗಳ ವಿವರಗಳನ್ನು ಈ ಕೆಳಗೆ ನೀಡಲಾಗಿದೆ. ಈ ಎಲ್ಲಾ ಕಾರ್ಯಕ್ರಮಗಳಿಗೆ ತಮಗೆಲ್ಲರಿಗೂ ಹಾರ್ದಿಕ ಸ್ವಾಗತವನ್ನು ಬಯಸುತ್ತೇವೆ.

**ನಾಗರಪಂಚಮಿ**
ತಾ.07-08-2016ನೇ ಆದಿತ್ಯವಾರ
ಸಮಯ : ಬೆಳಿಗ್ಗೆ 9-00ರಿಂದ
12-00ರ ತನಕ

**ವರಮಹಾಲಕ್ಷ್ಮೀ ವ್ರತ**
(ಮಹಿಳಾ ವೇದಿಕೆಯ ವತಿಯಿಂದ)
ತಾ.12-08-2016ನೇ ಶುಕ್ರವಾರ
ಸಮಯ : ಸಂಜೆ 4-00ರಿಂದ

**ಋಗುಪಾಕರ್ಮ**
ತಾ.17-08-2016ನೇ ಬುಧವಾರ
ಸಮಯ : ಬೆಳಿಗ್ಗೆ 10-00ರಿಂದ
ಅಪರಾಹ್ನ 1-00ರ ತನಕ
(ಕಾರ್ಯಕ್ರಮದ ನಂತರ ಪ್ರಸಾದ ಭೋಜನ ಇದೆ.)

**ಹೂವಿನ ಪೂಜೆ**
(ಮಹಿಳಾ ವೇದಿಕೆಯ ವತಿಯಿಂದ)
ತಾ.26-08-2016ನೇ ಶುಕ್ರವಾರ
ಸಮಯ : ಸಂಜೆ 5-00 ಗಂಟೆಗೆ

**ಶೃಂಗೇರಿಯಲ್ಲಿ ಗುರುಗಳ ಭೇಟಿ**
ತಾ.21-08-2016ನೇ ಆದಿತ್ಯವಾರ
ಚಾತುರ್ಮಾಸ ನಿರತರಾಗಿರುವ ಗುರುಗಳ ಭೇಟಿಗೆ ತೆರಳಲು ಬೆಳಿಗ್ಗೆ 7-00 ಗಂಟೆಗೆ ಶ್ರೀಶಾರದಾ ಮಂಟಪದಲ್ಲಿ ವಾಹನದ ವ್ಯವಸ್ಥೆ ಮಾಡಲಾಗುತ್ತದೆ. ಆಸಕ್ತ ಸಮಾಜ ಬಾಂಧವರು ಮುಂಚಿತವಾಗಿ ಕಾರ್ಯದರ್ಶಿಗಳು (9036443884) ಅಥವಾ ಮೆನೇಜರ್ (9448108920, 0820-2520754) ರವರಲ್ಲಿ ತಮ್ಮ ಹೆಸರನ್ನು ನೋಂದಾಯಿಸಬೇಕಾಗಿ ವಿನಂತಿಸಲಾಗಿದೆ.

ಶ್ರೀ ಕೆ. ಸುರೇಶ್ ರಾವ್, ಕಾರ್ಯದರ್ಶಿ
ಶ್ರೀ ಕೆ. ಸುಧಾಕರ ರಾವ್, ಕೋಶಾಧಿಕಾರಿ
ಶ್ರೀ ವೈ. ಭುವನೇಂದ್ರ ರಾವ್, ಅಧ್ಯಕ್ಷರು

ಮತ್ತು ಆಡಳಿತ ಮಂಡಳಿ ಸರ್ವಸದಸ್ಯರು

# ಸಂಪಾದಕೀಯ.....

- ಡಾ| ವೈ. ಸುದರ್ಶನ್ ರಾವ್

ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ), ಕುಂಜಿಬೆಟ್ಟು, ಉಡುಪಿಯು ನಮ್ಮ ಸಮಾಜಬಾಂಧವರ ಸೇವೆಯಲ್ಲಿ ತೊಡಗಿ ಐದು ದಶಕಗಳಾಗುತ್ತಾ ಬಂದಿದೆ. ಸುವರ್ಣಮಹೋತ್ಸವದ ಸಮಯದಲ್ಲಿ ನಮ್ಮ ಸಮಾಜದ ಒಗ್ಗಟ್ಟು ಇನ್ನಷ್ಟು ಬಲಯುತವಾಗಲು ನಮ್ಮ ಸಮಾಜ ಬಾಂಧವರೊಳಗೆ ಪರಸ್ಪರ ಪರಿಚಯ ಹಾಗೂ ಸಂವಹನ ಅತೀ ಅಗತ್ಯವಾಗಿದೆ. ಅಂತೆಯೇ ಈ ನಿಟ್ಟಿನಲ್ಲಿ ನಮ್ಮ ಸಂಘದ ವತಿಯಿಂದ ಹಾಗೂ ಶ್ರೀ ಶಾರದಾ ಪತ್ರಿಕೆಯ ಸಹಭಾಗಿತ್ವದಲ್ಲಿ ಉಡುಪಿ ತಾಲೂಕಿನ ನಮ್ಮ ಸಮಾಜಬಾಂಧವರ ಸಮಗ್ರ ಮಾಹಿತಿಯುಳ್ಳ ಹೊತ್ತಗೆಯನ್ನು ಹೊರತರುವುದೆಂದು ನಿಶ್ಚಯಿಸಿದ್ದೇವೆ. ಈ ಮಾಹಿತಿಯ ಸಂಗ್ರಹಣೆಗಾಗಿ ಸಂಘದ ಕಾರ್ಯಕರ್ತರು ಸಾಧ್ಯವಾದಷ್ಟು ಮನೆಗಳಿಗೆ ಮುಖತಃ ಭೇಟಿ ನೀಡಿ ಮಾಹಿತಿ ಸಂಗ್ರಹಿಸಲು ನಿರ್ಧರಿಸಲಾಗಿದೆ. ಮಾಹಿತಿ ಸಂಗ್ರಹಣೆಯ ಕೆಲಸವು ಬೇಗನೆ ಮುಗಿಯುವಂತಾಗಲು ಉಡುಪಿ ತಾಲೂಕಿನ ಸಮಾಜಬಾಂಧವರು ಆದಷ್ಟು ಬೇಗನೆ ಶ್ರೀ ಶಾರದಾ ಪತ್ರಿಕೆಯಲ್ಲಿ ಪ್ರಕಟಿಸಿರುವ ಹಾಗೂ ಸಂಘದ ಕಚೇರಿಯಲ್ಲಿ ಲಭ್ಯವಿರುವ ಫಾರಂನ್ನು ಭರ್ತಿಮಾಡಿ ಅಧ್ಯಕ್ಷರು, ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ ಇಲ್ಲಿಗೆ ತಲುಪಿಸಿ ಸಹಕರಿಸಬೇಕಾಗಿ ವಿನಂತಿ.

ಶ್ರೀ ಶಾರದಾ ಪತ್ರಿಕೆಯು ನಮ್ಮ ಸಂಘದ ಮುಖವಾಣಿಯಾಗಿದ್ದು ಸಂಘಕ್ಕೂ ಸಮಾಜಬಾಂಧವರಿಗೂ ನಡುವೆ ಸಂಪರ್ಕ ಸೇತುವೆಯಾಗಿದೆ. ಆದುದರಿಂದ ಈಗಾಗಲೇ ಪತ್ರಿಕೆಯ ಸದಸ್ಯರಾಗದವರು ಅದರ ಸದಸ್ಯರಾಗಿ ಪ್ರೋತ್ಸಾಹಿಸಬೇಕಾಗಿ ವಿನಂತಿ. ಅಷ್ಟು ಮಾತ್ರವಲ್ಲದೇ ನಮ್ಮ ಸಮಾಜದ ಸುದ್ದಿಗಳನ್ನು, ನಮ್ಮ ದೇವಸ್ಥಾನಗಳ ಪರಿಚಯವನ್ನು, ನಮ್ಮ ಸಮಾಜದ ವಿವಿಧ ಸಂಸ್ಥೆಗಳು ನಡೆಸುತ್ತಿರುವ ಕಾರ್ಯಕ್ರಮಗಳನ್ನು ಹಾಗೂ ನಮ್ಮ ಸಂಸ್ಕೃತಿಯನ್ನು ತಿಳಿಸುವಂತಹಾ ಲೇಖನಗಳನ್ನು ನಾವು ಈ ಪತ್ರಿಕೆಯಲ್ಲಿ ಪ್ರಕಟಿಸುತ್ತಿದ್ದೇವೆ. ನಮ್ಮ ಮಕ್ಕಳು ಈ ಲೇಖನಗಳನ್ನು ಓದಿದಾಗ ನಮ್ಮ ಸಮಾಜ ಬಾಂಧವರೊಡನೆ ಪರಿಚಯ ಹಾಗೂ ಸಂಪರ್ಕ ಬೆಳೆಯುತ್ತದೆ ಹಾಗೂ ಅವರಲ್ಲಿ ಸ್ಥಾನಿಕ ಬ್ರಾಹ್ಮಣರೆಂಬ ಅಭಿಮಾನ ಬೆಳೆಯುತ್ತದೆ. ಇದರಿಂದಾಗಿ ಸ್ಥಾನಿಕ ಬ್ರಾಹ್ಮಣ ಸಂಸ್ಕೃತಿಯು ಮುಂದಿನ ಪೀಳಿಗೆಗೂ ಸಾಗಿ ಬರುವಂತಾಗುತ್ತದೆ ಎಂಬ ಆಶಯ ನಮ್ಮದು. ಆದುದರಿಂದ ಪರವೂರಿನಲ್ಲಿ ನೆಲೆಸಿರುವ ತಮ್ಮ ಮಕ್ಕಳನ್ನೂ ಈ ಪತ್ರಿಕೆಯ ಸದಸ್ಯರಾಗುವಂತೆ ವಿಶೇಷವಾಗಿ ವಿನಂತಿಸುತ್ತಿದ್ದೇವೆ.

**ಶ್ರೀ ಶಾರದಾ ವೇದಿಕೆಯ ಸದಸ್ಯತನ ಇಂತಿದೆ: ಮಹಾಪೋಷಕರು ರೂ.10000 ಪೋಷಕರು ರೂ.5000 ದಾನಿಗಳು ರೂ.1000 ಆಜೀವ ಸದಸ್ಯರು ರೂ.500**

ನಮ್ಮ ಸಂಘದಲ್ಲಿ ಒಟ್ಟು 787 ಜನ ಸದಸ್ಯರಿದ್ದು ಇದರಲ್ಲಿ ದೇಶವಿದೇಶಗಳಲ್ಲಿ ನೆಲೆಸಿರುವ ಸಮಾಜಬಾಂಧವರೂ ಇದ್ದಾರೆ. ಉಡುಪಿ ತಾಲೂಕಿನಲ್ಲಿರುವ ಸಮಾಜ ಬಾಂಧವರ ಸಂಖ್ಯೆಗೆ ಹೋಲಿಸಿದಾಗ ಸಂಘದ ಸದಸ್ಯರ ಸಂಖ್ಯೆ ಕಡಿಮೆಯೆನಿಸುತ್ತದೆ. ಆದುದರಿಂದ ಸಮಾಜಬಾಂಧವರೆಲ್ಲರೂ ನಮ್ಮ ಸಂಘಕ್ಕೂ ಸದಸ್ಯರಾಗಿ ಅದರ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಅದರ ಬಲವನ್ನು ಇನ್ನಷ್ಟು ಹೆಚ್ಚಿಸಬೇಕಾಗಿ ವಿನಂತಿ. **ಆಜೀವ ಸಾಮಾನ್ಯ ಸದಸ್ಯತನ ಶುಲ್ಕ ರೂ.101, ಪೋಷಕರು ರೂ.1001 ಮತ್ತು ಮಹಾಪೋಷಕರು ರೂ.5000.**

ಸುವರ್ಣಮಹೋತ್ಸವದ ವರ್ಷದ ಸಂಭ್ರಮದಲ್ಲಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಿದ್ದೇವೆ. ಈ ಸಂಭ್ರಮದ ನೆನಪು ಶಾಶ್ವತವಾಗಿ ದಾಖಲಾಗಿರುವಂತೆ ಸುವರ್ಣಮಹೋತ್ಸವ ಸಂಚಿಕೆಯನ್ನು ಹೊರತರಲಿದ್ದೇವೆ. ಈ ಸಂಚಿಕೆಗೆ ತಾವೆಲ್ಲರೂ ಶುಭಕೋರುವ ಜಾಹೀರಾತುಗಳನ್ನು ನೀಡಿ ಪ್ರೋತ್ಸಾಹಿಸಬೇಕಾಗಿ ವಿನಂತಿ. ಜಾಹೀರಾತು ದರ ಇಂತಿದೆ: **ಕಲರ್ ಕವರ್‌ಪೇಜ್ ರೂ.25000 ಬಹುವರ್ಣಪುಟ ರೂ.8000 ಕಪ್ಪು ಬಿಳುಪು ಪುಟ ರೂ.6000**

ತಮ್ಮೆಲ್ಲರ ಸಹಕಾರದ ನಿರೀಕ್ಷೆಯಲ್ಲಿರುವ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘದ ಪದಾಧಿಕಾರಿಗಳು ಮತ್ತು ಶ್ರೀ ಶಾರದಾ ವೇದಿಕೆಯ ಸದಸ್ಯರು.


**ಸಂಪಾದಕ ಮಂಡಳಿ**

ಡಾ| ವೈ. ಸುದರ್ಶನ ರಾವ್, ಕುಕ್ಕಿಕಟ್ಟೆ
ಶ್ರೀ ವೈ. ಮೋಹನ ರಾವ್, ಬ್ರಹ್ಮಗಿರಿ
ಶ್ರೀ ಹೆಚ್.ಎನ್.ಶ್ಯಾನುಭಾಗ್, ಅಂಬಲ್ಪಾಡಿ
ಶ್ರೀ ಟಿ. ಸುರೇಶ್ ರಾವ್, ನಿಟ್ಟೂರು
ಶ್ರೀ ವೈ. ಪ್ರಕಾಶ್ ಕುಮಾರ್, ಕುಕ್ಕಿಕಟ್ಟೆ

ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನ ಹಾಗೂ ವೈಯಕ್ತಿಕ ಜಾಹೀರಾತುಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಹಾಗೂ ಜಾಹೀರಾತುದಾರರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ ಅಥವಾ ಪ್ರಕಾಶಕರ ಅಭಿಪ್ರಾಯ ವಾಗಿರಬೇಕಾಗಿಲ್ಲ. ಲೇಖನಗಳನ್ನು, ಸುದ್ದಿಗಳನ್ನು ಮತು ಜಾಹೀರಾತುಗಳನ್ನು ಪತ್ರಿಕೆಯ ಮೂಲ ಚಿಂತನೆಗೆ ಅನುಗುಣವಾಗಿ ಸೂಕ್ತ ಮಾರ್ಪಾಡು ಮಾಡಿಕೊಳ್ಳುವ ಅಧಿಕಾರ ಸಂಪಾದಕ ಮಂಡಳಿಗಿದೆ.
-ಸಂಪಾದಕ ಮಂಡಳಿ


**ಪತ್ರಿಕೆಯ ಓದುಗರಿಗೆ ನಾಗರಪಂಚಮಿ ಮತ್ತು ವರಮಹಾಲಕ್ಷ್ಮೀವ್ರತ ಹಬ್ಬಗಳ ಶುಭಾಶಯಗಳು**

## ಸ್ಥಾನಿಕ ಬ್ರಾಹ್ಮಣರ ದೇವಸ್ಥಾನಗಳ ಪರಿಚಯ ಮಾಲೆ-11

# ಶ್ರೀ ವಿನಾಯಕ, ಶ್ರೀ ಜನಾರ್ಧನ ದೇವಸ್ಥಾನ, ಅಮುಂಜೆ, ಮಂಗಳೂರು ತಾಲೂಕು





ಡಾ. ಗುರುರಾಜ ಭಟ್ಟರು ತಮ್ಮ ತುಳುನಾಡು ಎಂಬ ಪುಸ್ತಕದಲ್ಲಿ ಸ್ಥಾನಿಕ ಬ್ರಾಹ್ಮಣರ ಬಗ್ಗೆ ಬರೆದಿರುವ ಅಧ್ಯಾಯದಲ್ಲಿ ಸ್ಥಾನಿಕ ಬ್ರಾಹ್ಮಣರು ಸುಮಾರು ಹನ್ನೊಂದು ಅಥವಾ ಹನ್ನೆರಡನೆಯ ಶತಮಾನಗಳ ಹಿಂದಿನಿಂದಲೂ ಈ ತುಳುನಾಡಿನಲ್ಲಿದ್ದ ಅತ್ಯಂತ ಪುರಾತನ ಬ್ರಾಹ್ಮಣರು ಎಂಬುವುದಕ್ಕೆ ಆಧಾರವಾಗಿ ಉಲ್ಲೇಖಿಸಿರುವ ದೇವಸ್ಥಾನವಿದು. ಪೊಳಲಿಯ ಬಳಿ ಇರುವ ಅಮುಂಜೆಯ ಸುಂದರವಾದ ಗ್ರಾಮೀಣ ಪರಿಸರದಲ್ಲಿ ಗುರುಪುರ ಹೊಳೆಯ ಉಪನದಿಯೊಂದರ ತಟದಲ್ಲಿ ತನ್ನ ಈ ಐತಿಹಾಸಿಕ ಮಹತ್ವವನ್ನು ಬಚ್ಚಿಟ್ಟುಕೊಂಡಿರುವ ದೇವಸ್ಥಾನವಿದು.

ಜನಾರ್ಧನ ಈ ದೇವಳದ ಪ್ರಧಾನ ದೇವರು. ಪಾಣಿಪೀಠವನ್ನೂ ಸೇರಿಸಿ ಸುಮಾರು ಐದಡಿ ಎತ್ತರದ ಕರಿಶಿಲೆಯ ಸುಂದರವಾದ ವಿಗ್ರಹವಿದು. ಚತುರ್ಭುಜನಾದ ವಿಗ್ರಹಕ್ಕೆ ಕಲ್ಲಿನದ್ದೇ ಪ್ರಭಾವಳಿಯನ್ನು ಶಿಲ್ಪಿಯು ರಚಿಸಿದ್ದಾನೆ. ಶತಮಾನಗಳ ಹಿಂದೆ ಅನ್ಯರ ಆಕ್ರಮಣಕ್ಕೆ ತುತ್ತಾದ ಕುರುಹಾಗಿ ವಿಗ್ರಹದ ಪ್ರಭಾವಳಿಯ ಎಡಭಾಗವು ಶಂಖವನ್ನು ಹಿಡಿದಿರುವ ಎಡಕೈಯ ಭಾಗದೊಂದಿಗೆ ತುಂಡಾಗಿದೆ. ಗರ್ಭ ಗುಡಿಯ ಎಡಭಾಗದಲ್ಲಿ ವಿನಾಯಕನ ವಿಗ್ರಹವನ್ನು ಬೇರೆಯೇ ಗುಡಿಯಲ್ಲಿ ಪ್ರತಿಷ್ಠಾಪಿಸಲಾಗಿದೆ. ಈ ವಿಗ್ರಹವೂ ಜನಾರ್ಧನದೇವರ ವಿಗ್ರಹದಂತೆ ಕರಿಶಿಲೆಯಲ್ಲಿ ಮಾಡಲಾಗಿದ್ದು ಅಷ್ಟೇ ಪುರಾತನವಾಗಿದೆ. ವಿನಾಯಕನ ಬಲಕೈಯಲ್ಲಿ ಅಭಯ ಹಸ್ತವಿದೆ. ಇನ್ನೊಂದು ಕೈಯಲ್ಲಿ ಮೋದಕವನ್ನು ಹಿಡಿದು ಕೊಂಡಂತಿದೆ.

ಪ್ರತೀ ವರ್ಷ ಜನವರಿ ತಿಂಗಳ ಪ್ರಥಮ ಆದಿತ್ಯವಾರದಂದು ಇಲ್ಲಿ ಅಪ್ಪಸೇವೆ ಜರಗುತ್ತದೆ. ಇದನ್ನು ವರ್ಷಾವಧಿ ಉತ್ಸವದಂತೆ ಸಂಭ್ರಮದಿಂದಲೇ ಆಚರಿಸುತ್ತಾರೆ. ನಿತ್ಯಪೂಜೆಗೆ ಅನ್ಯಮತಸ್ಥ ಅರ್ಚಕರನ್ನು ನೇಮಿಸಿಕೊಳ್ಳಲಾಗಿದೆ. ಸುಮಾರು ಇಪ್ಪತ್ತು ವರ್ಷಗಳ ಹಿಂದೆ ಊರವರ ಸಹಕಾರದಿಂದ ಜೀರ್ಣೋದ್ಧಾರ ನಡೆದಿದ್ದು ಬ್ರಹ್ಮಕಲಶೋತ್ಸವ ನೆರವೇರಿದೆ.

ಪ್ರಸ್ತುತ ನಾಗೇಶರಾಯರು ಇದರ ಮೊಕ್ತೇಸರರಾಗಿದ್ದು. ಅನಾದಿ ಕಾಲದಿಂದಲೂ (ಸುಮಾರು ಐನೂರು ವರ್ಷ) ತಮ್ಮ ಕುಟುಂಬದವರೇ ದೇವಳದ ಆಡಳಿತ ಹಾಗೂ ಅರ್ಚಕತನ ನಡೆಸಿಕೊಂಡು ಬರುತ್ತಿದ್ದರೆಂದು ಅವರು ನೆನಪಿಸಿಕೊಳ್ಳುತ್ತಾರೆ. ದೇವಳದ ಜಾಗವೂ ಅವರ ಕುಟುಂಬದ ಹೆಸರಿನಲ್ಲಿದೆ. ಆದರೆ ದೇವಸ್ಥಾನವನ್ನು ಧಾರ್ಮಿಕ ಇಲಾಖೆಯ ಆಡಳಿತ (endowment)ಕ್ಕೆ ಹಸ್ತಾಂತರಿಸಲಾಗಿದೆ. ಪೊಳಲಿ ಆಸುಪಾಸಿನ ಸಮಾಜ ಬಾಂಧವರು ಈ ದೇವಳವನ್ನು ಕೇಂದ್ರವಾಗಿಟ್ಟುಕೊಂಡು ಸಂಘಟಿತರಾಗಿ ಈ ದೇವಸ್ಥಾನದಲ್ಲಿ ಪದೇ ಪದೇ ಕಾರ್ಯಕ್ರಮಗಳನ್ನು ಏರ್ಪಡಿಸಿ ಈ ದೇವಸ್ಥಾನವನ್ನು ನಮ್ಮ ಸಮಾಜಕ್ಕೆ ಉಳಿಸಿಕೊಡುವಲ್ಲಿ ಕ್ರಿಯಾಶೀಲರಾಗಬೇಕಾದ ಅಗತ್ಯವಿದೆ. ಇನ್ನೂ ಹೆಚ್ಚಿನ ಮಾಹಿತಿಗಾಗಿ ಶ್ರೀ ನಾಗೇಶರಾಯರನ್ನು 9880052717 ನಲ್ಲಿ ಸಂಪರ್ಕಿಸಬಹುದು


With Best Compliments from :



**Dr. Sanath S. Rao**
M.B.B.S., M.D.(Derm, Vene, Lep)
Fellow Cosmetology (St. John's Hospital)
SKIN SPECIALIST & COSMETOLOGIST

Clinic : 0820-6529474
Mobile : 9886093199
drsanathrao@gmail.com

**JALAJA SKIN CARE AND COSMETOLOGY CLINIC**
Medicare Centre, Behind Pai Electronics, Court Back Road, Udupi - 576 101.
Visit us at : www.jalajaskincare.com
Timings : 9-30 a.m. to 2-00 p.m., 4-30 p.m. to 8-00 p.m.
Also available at Lalith Hospital (11-30 a.m. to 2-00 p.m.)

**ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)**
ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101. ಫೋನ್ : 2522408

ನಿಮ್ಮ ಕನಸಿನ ಮನೆ ಸಾಕಾರಗೊಳಿಸಿ
“ಗೃಹ ಸಾಲ”
(ಸಂಘದ ಪ್ರಾಥಮಿಕ ಸದಸ್ಯರಿಗೆ 11.50%)

| | | |
|---|---|---|
| ವಾಹನ ಸಾಲ | : | 13% |
| ಹಳೆಯ ವಾಹನ | : | 15% |
| ಆಭರಣ ಸಾಲ | : | 13% |
| ವೈಯಕ್ತಿಕ ಸಾಲ | : | 16% |
| ಶಿಕ್ಷಣ ಸಾಲ | : | 13% |
| ಅಡಮಾನ ಸಾಲ | : | 13% |

**ಠೇವಣಿಗಳ ಬಡ್ಡಿದರ**

| | | | |
|---|---|---|---|
| ಉಳಿತಾಯ ಖಾತೆ | : 5% | ನಿತ್ಯನಿಧಿ ಠೇವಣಿ | : 5% |
| 46 ದಿನಗಳಿಂದ 181 ದಿನಗಳು | : 6%, | 182 ದಿನಗಳಿಂದ 364 ದಿನಗಳು | : 7%, |
| 1 ವರ್ಷ ಮತ್ತು 2 ವರ್ಷಕ್ಕಿಂತ ಕಡಿಮೆ | : 9% | 2 ವರ್ಷ ಮತ್ತು ಹೆಚ್ಚಿನ ಅವಧಿಗೆ | : 9.5% |

(ಹಿರಿಯ ನಾಗರಿಕರಿಗೆ/ಸಂಘ ಸಂಸ್ಥೆಗಳಿಗೆ 1 ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣಿಗಳಿಗೆ 0.5% ಹೆಚ್ಚಿಗೆ ನೀಡಲಾಗುವುದು)


2008-09 ರಿಂದ 2014-15ನೇ ವರ್ಷದ ವರೆಗಿನ ಲಾಭಾಂಶವನ್ನು ಪಡೆದುಕೊಳ್ಳದಿರುವ ಸದಸ್ಯರು ಸೊಸೈಟಿಯ ವ್ಯವಹಾರದ ಸಮಯದಲ್ಲಿ ಬಂದು ಪಡೆದುಕೊಳ್ಳಬಹುದು. ಅಥವಾ ತಮ್ಮ ಹೆಸರಿನಲ್ಲಿ ಉಳಿತಾಯ ಖಾತೆಯನ್ನು ತೆರೆದಲ್ಲಿ ಪ್ರತಿ ವರ್ಷದ ಲಾಭಾಂಶವನ್ನು ಆ ಖಾತೆಗೆ ಜಮೆ ಮಾಡಲಾಗುವುದು.

ನಿಮ್ಮ ಹತ್ತಿರದ ಶಾಖೆಯನ್ನು ಇಂದೇ ಸಂಪರ್ಕಿಸಿರಿ

ಪ್ರಧಾನ ಕಛೇರಿ (☎ 2522408) ಕುಕ್ಕಿಕಟ್ಟೆ ಶಾಖೆ (☎ 2592133) ಪಡುಬಿದ್ರಿ ಶಾಖೆ (☎ 2556608) ಕೋಟೇಶ್ವರ ಶಾಖೆ (☎ 9341854114)

## ಒಳದನಿಯ ಪಲುಕುಗಳು (ವಿಮರ್ಶಾಲೇಖನಗಳ ಸಂಕಲನ)

- ವೈ. ಮೋಹನ ರಾವ್




ಕಾತ್ಯಾಯಿನಿ ಕುಂಜಿಬೆಟ್ಟು ಇವರು ಉಡುಪಿಯ ಎಂ.ಜಿ.ಎಂ. ಕಾಲೇಜಿನ ಕನ್ನಡ ಉಪನ್ಯಾಸಕಿ. ಇವರ ಮಹತ್ವದ ಕೃತಿ ‘‘ಒಳದನಿಯ ಪಲುಕುಗಳು’’. ಈ ಕೃತಿಯಲ್ಲಿ 41 ವಿಮರ್ಶಾ ಲೇಖನಗಳಿವೆ. ವಿಭಿನ್ನ ದೃಷ್ಟಿಯಿಂದ ಬರೆದ ಈ ಲೇಖನಗಳು ಸಾಂಸ್ಕೃತಿಕ ಇತಿಹಾಸದ ಭಾಗವಾಗಿ ಉಳಿದಿವೆ. ಪ್ರತಿಯೊಂದು ಲೇಖನವೂ ಸೂಕ್ತ ಚಿತ್ರದೊಂದಿಗೆ ಪ್ರಕಟಿಸಲ್ಪಟ್ಟಿದೆ. ಇದು ಈ ಕೃತಿಯ ವಿಶೇಷ ಲಕ್ಷಣವಾಗಿದೆ.

ಒಳದನಿಯ ಪಲುಕುಗಳು ಕೃತಿಯಲ್ಲಿ ‘ಕೃತಜ್ಞತೆ’ ನೀಡುವಾಗ ಕಾತ್ಯಾಯಿನಿ ಕುಂಜಿಬೆಟ್ಟು ಇವರು ತಿಳಿಸುತ್ತಾರೆ – ‘‘ಬಾಲ್ಯದಿಂದಲೇ ಬಿಟ್ಟ ಕಣ್ಣು ಬಿಟ್ಟಂತೆ ಬೆಪ್ಪುಕಟ್ಟಿ ಯಕ್ಷಗಾನ, ಹರಿಕಥೆ, ನಾಟಕ, ಸಾಹಿತ್ಯ, ಸಂಗೀತಗಳೊಳಗೆ ಮುಳುಗಿ ಇಲ್ಲವಾಗುವ ‘ತಲ್ಲೀನತೆ’ ಇಲ್ಲಿಯವರೆಗೂ ಬೆನ್ನು ಬಿಡದೆ ಹಿಂಬಾಲಿಸಿಕೊಂಡು ಕಾಯುತ್ತಲೇ ಬಂದಿರುವುದು ನನ್ನ ಬಾಳಿನ ಯೋಗ. ಹುಟ್ಟೂರು ಬಜಪೆಯನ್ನು ಬಿಟ್ಟು, ನವಿಲುಗರಿ ತುರಾಯಿಯನ್ನು ಸಿಕ್ಕಿಸಿಕೊಂಡು ಗೆಜ್ಜೆ ಕಟ್ಟಿ ಸದಾ ಹೆಜ್ಜೆಹಾಕುತ್ತಲೇ ಇರುವ ಕಡಗೋಲು ಕೊಳಲ ಕೃಷ್ಣನ ಉಡುಪಿಗೆ ಬಂದ ಮೇಲಂತೂ ಪ್ರೇಕ್ಷಕಳೊ ಶ್ರೋತೃವೋ ಆಗುವ ಅವಕಾಶಗಳು ಹೇರಳವಾಗಿ ಲಭಿಸಿವೆ. ಲಲಿತಕಲೆಗಳ ರಂಗವಾಗಿರುವ ಉಡುಪಿ ಹಾಗೂ ಸುತ್ತಮುತ್ತ ಕಲಾಸ್ವಾದದ ರಸಗಳಿಗೆಗಳಲ್ಲಿ ಹುಟ್ಟಿಕೊಂಡ ಭಾವಗಳನ್ನು, ಅಭಿಪ್ರಾಯಗಳನ್ನು ತದನಂತರ ಪುನರನುಭವಿಸುತ್ತ ಮೆಲುಕು ಹಾಕುವಾಗೆಲ್ಲ ಹುಟ್ಟಿಕೊಂಡ ಪಲುಕುಗಳನ್ನು ಲೇಖನರಾಗಗಳನ್ನಾಗಿಸಿ ಪತ್ರಿಕೆಗಳಿಗೆ ಕಳುಹಿಸುತ್ತಿದ್ದೆ. ಪ್ರೀತಿಯಿಂದ ಪ್ರಕಟಿಸಿರುವ ಎಲ್ಲ ಪತ್ರಿಕೆಗಳ ಸಂಪಾದಕೀಯ ಬಳಗಗಳಿಗೆ ನಾನು ಋಣಿ. ಕಲಾಪ್ರದರ್ಶನಗಳನ್ನು ನೀಡಿ ಸಹೃದಯರಿಗೆ ರಸಾಸ್ವಾದ ನೀಡಿದ ಎಲ್ಲ ಕಲಾವಿದರಿಗೂ ಋಣಿ’’.


ಕಾತ್ಯಾಯಿನಿ ಕುಂಜಿಬೆಟ್ಟು ಇವರು ಎ.ಈಶ್ವರಯ್ಯನವರಿಗೆ ಹೀಗೆ ಕೃತಜ್ಞತೆಯನ್ನು ಸಲ್ಲಿಸುತ್ತಾರೆ– ‘‘ಆರಂಭದಿಂದಲೂ ನನ್ನ ಸಂಗೀತ, ನಾಟಕ ವಿಮರ್ಶಾಲೇಖನಗಳನ್ನು ‘ಉದಯವಾಣಿ’ ಪತ್ರಿಕೆಯಲ್ಲಿ ಪ್ರಕಟಿಸಿ ಭೇಟಿಯಾದಾಗಲೆಲ್ಲ ‘ಚೆನ್ನಾಗಿ ಬರೆಯುತ್ತಿ, ಬರೆದು ಕಳುಹಿಸುತ್ತಿರು’ ಎಂದು ಉತ್ಸಾಹ ಮೂಡಿಸುತ್ತಿದ್ದ ಹಿರಿಯ ಸಂಗೀತವಿಮರ್ಶಕ ಎ.ಈಶ್ವರಯ್ಯ’’.

ಕೃತಿಯ ‘ಒಳದನಿಗೊಂದು ಹೊರದನಿ’ಯಲ್ಲಿ ಡಾ। ನಾ.ದಾಮೋದರ ಶೆಟ್ಟಿ ಅವರು ಹೀಗೆ ತಿಳಿಸುತ್ತಾರೆ– ‘‘ತಮ್ಮ ಕಣ್ಣೆದುರಿಗೆ ಕಂಡ ಅಥವಾ ತಮಗೆ ಭಾಗವಹಿಸುವುದಕ್ಕೆ ಸಾಧ್ಯವಾದ ಕಾರ್ಯಕ್ರಮಗಳು– ಅವು ನಾಟಕ, ಸಂಗೀತ, ಕಾವ್ಯ,

(4ನೇ ಪುಟಕ್ಕೆ...)

## ಶ್ರೀ ಬಿ.ವಿ.ರಾವ್ ವಿರಚಿತ ‘ಭಕ್ತಿ ಹೂ ಗೊಂಚಲು’ (ಭಕ್ತಿ ಪರ ಕವನ ಸಂಗ್ರಹ)

-ಶ್ರೀ ಮ.ನಾ.ಹೆಬ್ಬಾರ




ಬಪ್ಪನಾಡು ವಿಜಯ ಕುಮಾರ್ ರಾವ್, ಇವರು ಕಿನ್ನಿಗೋಳಿಯಲ್ಲಿ 1946ರಲ್ಲಿ ಶ್ರೀ ಬಿ.ಗೋವಿಂದ ರಾವ್, ಶ್ರೀಮತಿ ಬಿ.ಸರಸ್ವತಿ, ಇವರ ಪುತ್ರರಾಗಿ ಜನಿಸಿದರು. ಸುರತ್ಕಲ್‌ನ ಆಗಿನ ಕೆ.ಆರ್.ಇ.ಸಿ. ಈಗಿನ ಎನ್.ಐ.ಟಿ.ಕೆ. ಯಲ್ಲಿ ಮೆಕ್ಯಾನಿಕಲ್ ಬಿ.ಇ ಉತ್ತೀರ್ಣರಾಗಿ ಮುಂಬೈಯಲ್ಲಿಯೂ, ಅನಂತರ ಬೆಂಗಳೂರಿನಲ್ಲಿಯೂ ಸೇವೆ ಸಲ್ಲಿಸಿ, ನಿವೃತ್ತಿ ಪಡೆದು; ಪೂರ್ಣ ಇಂಜಿನಿಯರ್ಸ್ ಪ್ರೈ.ಲಿ. ಇಲ್ಲಿದುಡಿದು ಸದ್ಯ ‘ನಚಿಕೇತ ಮನೋ ವಿಕಾಸ ಕೇಂದ್ರ’, ವಿಜಯ ನಗರ, ಬೆಂಗಳೂರು, ಇದನ್ನು ಸ್ಥಾಪಿಸಿ ಪ್ರಸ್ತುತ ಅದರ ಅಧ್ಯಕ್ಷರಾಗಿದ್ದಾರೆ.

ಶ್ರೇಷ್ಠ ಇಂಜಿಯರಾಗಿದ್ದ ಇವರು ಕವಿಗಳೂ ಆಗಿರುವುದು ಇವರ ವಿಶೇಷ ಸಾಧನೆ. ಇವರ ಹಲವು ಕವನ ಸಂಗ್ರಹಗಳಲ್ಲಿ ‘ಭಕ್ತಿ ಹೂ ಗೊಂಚಲು’ ಎಂಬುದು ಒಂದು. ಇದರಲ್ಲಿ ಒಟ್ಟು 82 ಕವನಗಳಿವೆ. ದುರ್ಗಾ, ಅನ್ನಪೂರ್ಣೆ, ಅಂಬಿಕೆ ಅಪರ್ಣಾ – ಹೀಗೆ ಶಕ್ತಿ ದೇವಿ ಪರ ಕವನಗಳು ಗೌರಿಯನ್ನು ಹಲವು ವಿಧದಿಂದ ಸ್ತುತಿಸುತ್ತವೆ.

‘‘ಪರಮ ಶಿವನ ಮನದ ರಾಣಿಗೆ
ಶರಣು ಬಂದ ಭಕ್ತ ವರ್ಗಕ್ಕೆ
ಅಭಯ ಕೊಡುವ ದಿವ್ಯ ಮಾತೆಗೆ
ವೀರ ದುರ್ಗೆ ಸ್ಕಂದ ಮಾತೆಗೆ’’

2014 ತುಲಾ ‘ಸಂಕ್ರಮಣ’ದಂದು ಬರೆದ ಕವಿತೆ ‘ಕಾವೇರಿಗೆ’ ಎಂಬುದು ಕೊಡಗು, ಮೈಸೂರು, ತಮಿಳುನಾಡುಗಳಲ್ಲಿ ಹರಿಯುವ ಕಾವೇರಿಯನ್ನು ಕುರಿತು–

‘‘ಭಾರತ ಮಾತೆಯ ಏಳನೆ ನದಿಯೇ
‘‘ನೀನೇ ದೇವಿ ಕಾವೇರಿ’’
ಎಂದು ನೆನೆಯುತ್ತಾರೆ.

ಶಿವ ಪರವಾದ 15 ಗೀತೆಗಳಲ್ಲಿ ಭೈರವ, ಕಾಶೀಶ್ವರ, ಕಾಳ ಹಸ್ತೀಶ್ವರ, ಕಾಂತಾವರದ ಈಶ್ವರ– ಹೀಗೆ ಪದ್ಯಗಳು ಸಾಗಿವೆ.

‘ರಮಣ ಮಹರ್ಷಿಗೆ’ ಎಂಬ ಹೆಸರಿನ ಎರಡು ಪ್ರತ್ಯ ಪ್ರತ್ಯೇಕ ಪದ್ಯಗಳಿವೆ. ಪಾವಂಜೆ ವಾಸಿ ಸುಬ್ರಹ್ಮಣ್ಯನ ಕುರಿತಾದ 3 ಕವನಗಳಿವೆ. ‘ಯೋಗಿ’ಯನ್ನು ಕುರಿತು ಹೀಗೆ ಬಣ್ಣಿಸುತ್ತಾರೆ:–

‘‘ನೆಲವೇ ಹಾಸಿಗೆ, ನೀಲಾಕಾಶದ
ಕೆಳಗಡೆ ಶಾಂತದಿ ಮಲಗುವನು’’
‘‘ಹೆಣ್ಣಲ್ಲಿ ಕಾಂಬನು ಲೋಕದ ಮಾತೆಯ’’
‘‘ಇವನೇ ಯೋಗಿಯು, ಲೋಕ ವಿರಾಗಿಯು
ದೇವನು ಬಂದನು ಗುರುವಾಗಿ’’

‘ಶಿವವರ್ಣ ಮಾಲಾ’, ‘ತಾಂಡವ ಗೀತೆ’, ’ಗವಿ ಗಂಗಾಧರೇಶ್ವರನಿಗೆ’, ಮುಂತಾದುವು ಶಿವಪಾರಮ್ಯವನ್ನು ಸಾರುತ್ತವೆ.


ಈ ಪುಸ್ತಕದ ಕೊನೆಯಲ್ಲಿ 15 ಸಂಸ್ಕೃತದಿಂದ ಕನ್ನಡಕ್ಕೆ ಅನುವಾದಿಸಲ್ಪಟ್ಟ ಕವನಗಳಿದ್ದು, 6 ಸಂಸ್ಕೃತದ ರಚನೆಗಳೂ ಇವೆ. ಆರಂಭದಲ್ಲಿಯೇ ಈ ಕೃತಿಯನ್ನು ‘ಮೃಡನವತಾರಿ ಗುರು ಶಂಕರ’ ಎಂಬ ಹೆಸರಿನಲ್ಲಿ ನಮ್ಮ ಆದಿಗುರುವಾದ ಅದ್ವೈತಾಚಾರ್ಯ ಭಗವಾನ್ ಶ್ರೀ ಶಂಕರಾಚಾರ್ಯರಿಗೆ ‘ಅರ್ಪಣೆ’ ಮಾಡಲಾಗಿದೆ. ಈ ಕವನ ಸಂಗ್ರಹದ ಅರ್ಪಣೆಗೆ ದೇವೀ ಅಷ್ಟಕ, ದೇವಿ ತ್ರಿಮೂರ್ತಿಗೆ, ಶರಣಾಗತಿ, ಗಣಪತಿ, ಜಗನ್ಮಾತೆ ಮತ್ತು ಶಿವಪಾದಕೆ– ಈ ಕವನಗಳನ್ನು ನಮ್ಮವರೇ ಆದ ಶ್ರೀಮತಿ ಸಂಧ್ಯಾ ಕೇಶವ್ ರಾವ್, ಇವರು ಭರತನಾಟ್ಯಕ್ಕೆ ಅಳವಡಿಸಿದ್ದಾರೆ.

ಕೆಲವು ಕಡೆಗಳಲ್ಲಿ ‘ಕವಿ ಸಮ್ಮಾನ’ವನ್ನು ಪಡೆದಿರುವ ಶ್ರೀ ಬಿ.ವಿ.ರಾವ್, ಇವರು ನಿಘಂಟು ತಜ್ಞ, ಶ್ರೀ ವೆಂಕಟ ಸುಬ್ಬಯ್ಯ, ಶ್ರೀ ಬಿ.ಜನಾರ್ದನ ಭಟ್, ಶ್ರೀ ನ.ಕೃಷ್ಣಪ್ಪ ಇವರುಗಳಿಂದ ಮೆಚ್ಚುಗೆಯನ್ನು ಪಡದಿರುವರು. ಶ್ರೀಯುತರು ನಮ್ಮವರು ಎಂಬುದು ಹೆಮ್ಮೆಯ ವಿಷಯವಾಗಿದ್ದು, ಇವರ ಸಾಹಿತ್ಯ ಕಾಯಕ ಇನ್ನೂ ಮುಂದುವರಿಯಲೆಂದು ಹಾರೈಸೋಣ

## 3 BOONS GIVE AND TAKE

–ವೈ.ವಿನುತಾ ರಾವ್




“3 boons give and take” ಇದು ಪ್ರಾಯಶಃ ನಮ್ಮಸಮಾಜದ ಓರ್ವ ಮಹಿಳಾ ಸಾಹಿತಿ ಇಂಗ್ಲೀಷ್‌ನಲ್ಲಿ ರಚಿಸಿದ ಮೊದಲ ಕಾದಂಬರಿ. ಕತೆಗಾರ್ತಿ ಹೊಸಬಳಾದಳೂ ಕತೆಪುಸ್ತಕ ಮೊದಲನೆಯದಾದರೂ ಕೊನೆಯವರೆಗೂ ಒಂದೇ ಓದಿನಲ್ಲಿ ನೀವು ಅದನ್ನು ಓದಿಮುಗಿಸುವಂತೆ ಮಾಡುವ ಹೊಸಶಕ್ತಿ, ಹೊಸಕತೆಯು ಅದರಲ್ಲಿದೆ.

ಶ್ರೀಮತಿ ಮಂಜುಳಾ ರಾವ್ ಇದರ ಲೇಖಕಿ. ಇವರು ಕಾರ್ಪೋರೇಶನ್ ಬ್ಯಾಂಕಿನಲ್ಲಿ ಡೆಪ್ಯುಟಿ ಜನರಲ್ ಮ್ಯಾನೇಜರ್ ಆಗಿ ನಿವೃತ್ತರಾಗಿದ್ದ ಬಪ್ಪನಾಡು ವೆಂಕಟ್ರಾವ್ ಹಾಗೂ ಶ್ರೀಮತಿ ಶಾಂಭವಿರವರ ಪುತ್ರಿ. ಅದ್ಯಪಾಡಿ ಶ್ರೀನಿವಾಸರಾವ್ ಶಾಂತಾ ದಂಪತಿಗಳ ಪುತ್ರ ಶ್ರೀ ಸುಶೀಲ್ ರಾವ್‌ರವರ ಪತ್ನಿ. ಕಂಪ್ಯೂಟರ್ ಸಾಯನ್ಸ್‌ನಲ್ಲಿ ಸ್ನಾತಕೋತ್ತರ ಪದವೀಧರೆ. ಇತ್ತೀಚಿನವರೆಗೂ ಮುಂಬಯಿಯಲ್ಲಿ ನೆಲೆಸಿದ್ದು ಈಗ ಬೆಂಗಳೂರಿಗೆ ತಮ್ಮ ವಾಸವನ್ನು ಬದಲಾಯಿಸಿದ್ದಾರೆ.

ಸಿದ್ದಾರ್ಥ ಎಂಬವನು ಈ ಕಾದಂಬರಿಯ ಹೀರೋ. 'ಧೂತ್ ಜೀ' ಎಂಬ ಕಾಲ್ಪನಿಕ ಪಾತ್ರದಿಂದ ಲೇಖಕಿಯು ತಾನು ಓದುಗರಿಗೆ ಹೇಳಬೇಕಾದುದನ್ನು ಹೇಳಿಸಿದ್ದಾರೆ. ನಮ್ಮ ದೇಶ ಇಂದು ಎದುರಿಸುತ್ತಿರುವ ಸಮಸ್ಯೆ ಎಂದರೆ ಕಸ ಹಾಗೂ ತ್ಯಾಜ್ಯ ವಸ್ತುಗಳ ನಿರ್ವಹಣೆ. ಹಬ್ಬ ಹರಿದಿನಗಳ ಮಾರನೆಯ ದಿನವಂತೂ ಎಲ್ಲಿ ನೋಡಿದರೂ ಕಸದ ರಾಶಿಯೇ ಕಾಣಿಸುತ್ತದೆ. ಈ ಸಮಸ್ಯೆ ಪರಿಹಾರವಾಗಬೇಕಾದರೆ ಜನರು ತಾವೇ ಮುಂದೆ ಬಂದು ಶುಚಿತ್ವದ ಕಾರ್ಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳಬೇಕು. ಎಲ್ಲರ ಸಹಕಾರ ಮತ್ತು ಸಕ್ರಿಯ ಪಾಲ್ಗೊಳ್ಳುವಿಕೆಯಿಂದ ಮಾತ್ರ ಮೋದಿಯವರ ಸ್ವಚ್ಛ ಭಾರತ ಮಿಶನ್ ಯಶಸ್ವಿಯಾಗಲು ಸಾಧ್ಯ. ಹೀಗೆ ಜನರೇ ಸ್ವಯಂ ಪ್ರೇರಣೆಯಿಂದ ಸ್ವಚ್ಛ ಭಾರತದ ಗುರಿಗೆ ಕೈ ಜೋಡಿಸುವಂತೆ ಮಾಡಲು ಲೇಖಕಿಯು “ಸ್ಮಾರ್ಟ ಬಿನ್” ಎಂಬ ಹೊಸ ಪರಿಕಲ್ಪನೆಯನ್ನು ಇಲ್ಲಿ ಪರಿಚಯಿಸಿದ್ದಾರೆ. ಇದೇ ತರಹದ ವ್ಯವಸ್ಥೆ ನಮ್ಮ ದೇಶದಲ್ಲಿ ಬರಬೇಕಾಗಿದೆ

21ನೆಯ ಶತಮಾನದಲ್ಲಿ ನಾವು ಆಧುನಿಕ ಸವಲತ್ತುಗಳಿಗೆ ಎಷ್ಟು ನಮ್ಮನ್ನು ಒಗ್ಗಿಸಿಕೊಂಡಿದ್ದೇವೆಂದರೆ ವಿದ್ಯುತ್, ಸ್ಮಾರ್ಟ್ ಫೋನ್, ಕಂಪ್ಯೂಟರ್‌ಗಳಿಲ್ಲದ ಬದುಕನ್ನು ಊಹಿಸಿಕೊಳ್ಳುವುದು ಸಾಧ್ಯವಿಲ್ಲವೆನ್ನುವ ಮಟ್ಟಿಗೆ ಅವು ನಮ್ಮ ಜೀವನದಲ್ಲಿ ಹಾಸುಹೊಕ್ಕಾಗಿವೆ. ಆದರೆ ಅಭಿವೃದ್ಧಿಯ ಭರದಲ್ಲಿ ನಾವು ಪರಿಸರವನ್ನು ಹಾಳು ಮಾಡುತ್ತಿದ್ದೇವೆ. ಇದರಿಂದಾಗಿ ಪರಿಸರದ ನೈಸರ್ಗಿಕ ಸಮತೋಲನವೇ ಅಸ್ತವ್ಯಸ್ತವಾಗಿದೆ. ನಾವು ಈಗಲೆ ಎಚ್ಚೆತ್ತುಕೊಳ್ಳದಿದ್ದರೆ ಭವಿಷ್ಯದಲ್ಲಿ ತೊಂದರೆಗಳನ್ನು ಎದುರಿಸಬೇಕಾಗುತ್ತದೆ ಎಂಬ ಎಚ್ಚರಿಕೆಯ ಕರೆಗಂಟೆಯನ್ನು ಲೇಖಕಿ ಬಾರಿಸಿದ್ದಾರೆ.

ಈ ಪುಸ್ತಕದ ಇನ್ನೊಂದು ವಿಶೇಷತೆಯೆಂದರೆ 'ಧೂತ್ ಜೀ' ಎನ್ನುವ ಕಾಲ್ಪನಿಕ ಪಾತ್ರದ ಸೃಷ್ಠಿ. ಲೇಖಕಿಯು ಇವತ್ತಿನ ಸಮಸ್ಯೆಗಳನ್ನೇ ಹೂರಣವನ್ನಾಗಿ ತೆಗೆದುಕೊಂಡಿದ್ದರೂ ಈ ಸಮಸ್ಯೆಗಳಿಗೆ 'ಧೂತ್ ಜೀ' ಎಂಬ ದೇವದೂತನು ಕಥಾನಾಯಕನಾದ ಸಿದ್ಧಾರ್ಥನೆಂಬ ಸಾಮಾನ್ಯ ವ್ಯಕ್ತಿಯ ಮೂಲಕ ಪರಿಹಾರವನ್ನು ಒದಗಿಸುವ ಕಥೆಯ ಸ್ವಾದ ಬಹಳ ಚೆನ್ನಾಗಿದೆ.

ಒಂದು ಒಳ್ಳೆಯ ಪುಸ್ತಕದ ಲಕ್ಷಣವೆಂದರೆ ಪುಸ್ತಕವನ್ನು ಓದಿದ ಮೇಲೂ ಅದರ ವಿಷಯಗಳ ಬಗ್ಗೆ ನಾವು ಯೋಚಿಸುವಂತಿರಬೇಕು, ಎಲ್ಲವನ್ನೂ ಸ್ವಾರ್ಥದೃಷ್ಟಿಯಿಂದ ಕಾಣುವ ನಮ್ಮ ದೃಷ್ಠಿಕೋನವನ್ನು ಬದಲಾಯಿಸುವಂತಿರಬೇಕು. ಅಂತಹ ಗುಣ ಈ ಪುಸ್ತಕಕ್ಕಿದೆ. ಆದುದರಿಂದ ಎಲ್ಲರೂ ಈ ಪುಸ್ತಕವನ್ನು ಓದಿರೆಂಬುದು ನನ್ನ ಆಶಯ. ಈ ಪುಸ್ತಕವು amazon ಎಂಬ ಅಂತರ್ಜಾಲ ಮಾರುಕಟ್ಟೆಯಲ್ಲಿ ರೂ 350/– ಗಳಿಗೆ ಹಾಗು Barnes and Noble ನಲ್ಲಿ $ 8.50/–ಕ್ಕೆ ದೊರೆಯುತ್ತದೆ. ಅಲ್ಲದೇ ಇದರ electronic version ebay, kindle, kobo reader , nook from Barnes and noble ಮತ್ತು google play store ನಲ್ಲಿ ದೊರೆಯುತ್ತದೆ.

ಈ ಪುಸ್ತಕವನ್ನು ಲೇಖಕಿಯು ಪ್ರಧಾನಿ ನರೇಂದ್ರ ಮೋದಿಯವರಿಗೆ ಅರ್ಪಿಸಿದ್ದಾರೆ. ಶ್ರೀಮತಿ ಮಂಜುಳಾರವರ ಲೇಖನಿಯಿಂದ ಇನ್ನೂ ಇಂತಹಾ ಪುಸ್ತಕಗಳು ಬರಲಿ, ಅವರು ಪ್ರಸಿದ್ಧ ಸಾಹಿತಿಯಾಗಲಿ ಎಂಬುದು ನಮ್ಮ ಆಶಯ.

# ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ)

ಕುಂಜಿಬೆಟ್ಟು, ಉಡುಪಿ–576101

## ಪ್ರಕಟಣೆ

**ಆತ್ಮೀಯ ಉಡುಪಿ ತಾಲೂಕಿನ ಸಮಾಜ ಬಾಂಧವರೇ.**

**ಉಡುಪಿ ತಾಲೂಕಿನ ನಮ್ಮ ಸಮಾಜಬಾಂಧವರ ವಿಳಾಸವನ್ನು ಪರಿಷ್ಕರಿಸಿ ಅನೇಕ ವರ್ಷಗಳಾಗಿವೆ. ಸಮಾಜಬಾಂಧವರ ಸಮಗ್ರ ಮಾಹಿತಿಯುಳ್ಳ ನೂತನ ಆವೃತ್ತಿಯನ್ನು ಹೊರತರುವ ಅಗತ್ಯವನ್ನು ಸಂಘವು ಮನಗಂಡ ಹಿನ್ನೆಲೆಯಲ್ಲಿ ನಮ್ಮ ಸಂಘದ ಸುವರ್ಣಮಹೋತ್ಸವದ ಆಚರಣೆಯ ಅಂಗವಾಗಿ ಉಡುಪಿ ತಾಲೂಕಿನ ಸಮಾಜಬಾಂಧವರ ಸಮಗ್ರ ಮಾಹಿತಿಯುಳ್ಳ ವಿಳಾಸ ಸಹಿತ ಪುಸ್ತಕವನ್ನು ಪ್ರಕಟಿಸುವ ನಿರ್ಣಯವನ್ನು ತೆಗೆದುಕೊಳ್ಳಲಾಗಿದೆ. ಈ ಕೆಳಗಿನ ಫಾರಂನ್ನು ಭರ್ತಿಮಾಡಿ ಅಧ್ಯಕ್ಷರು, ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು ಉಡುಪಿ 576101 ಈ ವಿಳಾಸಕ್ಕೆ ಕಳುಹಿಸಬೇಕಾಗಿ ವಿನಂತಿ**

Name of the head of family *:______________________________

Occupation and office address: ______________________________

______________________________

Qualification:______________________Mobile no.*:______________

Email:______________________ Blood group______________

Name of the spouse *______________________________

Occupation and office address: ______________________________

______________________________

Qualification:______________________Mobile no.*:______________

Email:______________________ Blood group______________

Residential address *:______________________________

______________________________

______________________________Pin No:______________

Land phone no:______________________________

Are you a member Of our Sangha *: Yes/No

Are you getting Sri Sharada Paper * : Yes/No

DETAILS OF CHILDREN

| Sl. no. | Name | Date of birth/ age | married (yes/no) | Blood group |
|---|---|---|---|---|
| 1. | | | | |
| 2. | | | | |
| 3. | | | | |

NAME & ADDRESS OF THE CHILDREN STAYING SEPARATE*

1) ______________________________

______________________________

Mobile______________________Email______________________

2) ______________________________

______________________________

Mobile______________________Email______________________

3) ______________________________

______________________________

Mobile______________________Email______________________

*Marked with * are very much required for our address book.*
*Please try to furnish these details without fail*

I give my consent to Sri Stanika Dravida brahmana Sangha (R.), Udupi to publish this information in address book

*Signature*

**ಒಳದನಿಯ ಪಲುಕುಗಳು...**

...3ನೇ ಪುಟದಿಂದ

ನೃತ್ಯ, ಯಕ್ಷಗಾನ, ಪ್ರಬಂಧ ಇತ್ಯಾದಿ ಯಾವುದೇ ಪ್ರಕಾರಗಳಿರಲಿ, ಅವನ್ನು ಕುರಿತು ದಾಖಲಿಸಬೇಕೆಂಬ ಮುತುವರ್ಜಿಯಿಂದಲೇ ಕಾತ್ಯಾಯಿನಿ ಅವರು ಅವುಗಳಲ್ಲಿ ಭಾಗವಹಿಸುತ್ತಾರೆ. ಅವರದು ಕಾಟಾಚಾರದ ಬರವಣಿಗೆ ಅಲ್ಲ; ಸಂಗೀತ, ನಾಟಕ, ನೃತ್ಯ, ಸಾಹಿತ್ಯಾದಿಗಳಲ್ಲಿ ಸಾಕಷ್ಟು ಪ್ರರಿಶ್ರಮವಿದೆ ಎಂಬುದು ಅವರ ಬರವಣಿಗೆಯಲ್ಲಿ ಸ್ಪಷ್ಟವಾಗುತ್ತದೆ''.

ಕೃತಿಯ ವಿಮರ್ಶಾ ಲೇಖನಗಳ ಕೆಲವು ಸಾಲುಗಳನ್ನು ಇಲ್ಲಿ ತಿಳಿಸುತ್ತೇನೆ.

''ಮನಸೆಳೆದ ಹಿಂದುಸ್ಥಾನಿ ಗಾಯನ'' (2002)ದಲ್ಲಿ ಸಂಗೀತಸಭಾ ಉಡುಪಿ ಇವರ ಆಶ್ರಯದಲ್ಲಿ ಕಳೆದ ಫೆಬ್ರವರಿ 12ರ ಸಂಜೆ ಮಣಿಪಾಲದ ಸಿಂಡಿಕೇಟ್ ಬ್ಯಾಂಕ್ ಗೋಲ್ಡನ್ ಜ್ಯುಬಿಲಿ ಸಭಾಂಗಣದಲ್ಲಿ ಯುವ ಗಾಯಕ ಶ್ರೀ ಮೌನೇಶ್ ಕುಮಾರ್ ಛಾವಣಿ ಅವರ ಹಿಂದೂಸ್ಥಾನಿ ಗಾಯನ ನಡೆಯಿತು..... ಭಾವಪೂರ್ಣವಾಗಿ ಹಾಡುವ ಇವರು ರಾಗ ವಿಸ್ತಾರದಲ್ಲಿ ತಾನ್, ಆಲಾಪ್, ಬೋಲ್‌ತಾನ್, ಸರ್ಗಮ್‌ಗಳ ಹದವರಿತ ಬಳಕೆ ಹಾಗೂ ತಮ್ಮ ಸರಳವಾದ ಆಡಂಬರಗಳಿಲ್ಲದ ಹೃದಯತಟ್ಟುವ ನಿರೂಪಣಾ ಶೈಲಿಯಿಂದ ಶ್ರೋತೃಗಳ ಮನಗೆದ್ದರು. ಕಚೇರಿಯ ಕೊನೆಯಲ್ಲಿ ಭಾಗೇಶ್ರೀ ರಾಗದ ಧ್ರುತ್ ಏಕತಾಲದ ಖ್ಯಾಲ್‌ನಲ್ಲಿ ಆ ರಾಗದ ಶೃಂಗಾರ–ವಿರಹ ಭಾವವನ್ನು ಚೆನ್ನಾಗಿ ಪಡಿಮೂಡಿಸಿದರು. ತಬಲಾದಲ್ಲಿ ಶ್ರೀ ಶಶಿಕಾಂತ ಕುಲಕರ್ಣಿ ಹಾಗೂ ಹಾರ್ಮೋನಿಯಂ ನಲ್ಲಿ ಶ್ರೀ ಶಂಕರ ಶೆಣೈ ನೀಡಿದ ಅರ್ಥಪೂರ್ಣ ಸ್ಪಂದನ ದಿಂದ ಕಚೇರಿ ಮತ್ತಷ್ಟು ಕಳೆಗಟ್ಟಿತು.''

''ಒಂದು ವಿಶಿಷ್ಟ ಪ್ರಯೋಗ : ಅಡಿಗರ ಕೊಳಲು–ಭೂಮಿಗೀತ'' (2003) ಲೇಖನದಲ್ಲಿ ''ನೀನಾಸಂ ಬಳಗದ 'ಪಯಣ' ತಂಡದವರಿಂದ ಎಂ.ಗೋಪಾಲಕೃಷ್ಣ ಅಡಿಗರ ಕವನಗಳನ್ನಾಧರಿಸಿದ 'ಕೊಳಲು–ಭೂಮಿಗೀತ' ಎಂಬ ವಿಭಿನ್ನ ರೀತಿಯ ಪ್ರಯೋಗವು ಎಂ.ಜಿ.ಎಂ. ಕಾಲೇಜಿನ ಆಶ್ರಯದಲ್ಲಿ ಜೂನ್ 30ರಂದು ಕಾಲೇಜಿನ ರವೀಂದ್ರ ಮಂಟಪದಲ್ಲಿ ನಡೆಯಿತು..... ಆರಂಭದಲ್ಲಿ ಕವನಗಳನ್ನು ಪರಿಚಯಿಸಿ ಪ್ರಯೋಗವನ್ನು ಜನಸಾಮಾನ್ಯರಿಗೂ ಅರ್ಥವಾಗುವಂತೆ ತುಸು ಸರಳಗೊಳಿಸಿದ್ದರೆ 'ಪ್ರಯಾಣ'ದ ಪ್ರಯತ್ನ ಹೆಚ್ಚಿನ ಸಾರ್ಥಕ್ಯವನ್ನು ಪಡೆಯುತ್ತಿತ್ತು'' ಎಂದು ತಿಳಿಸಲ್ಪಟ್ಟಿದೆ.

''ತುಳುಕೂಟ (ರಿ.) ಉಡುಪಿಯ ಕೆಮ್ತೂರು ತುಳುನಾಟಕ ಪರ್ಬ''(2009)ದಲ್ಲಿ ಕೆಲವು ಸಾಲುಗಳು ಹೀಗಿವೆ– ''ಮಾಣಿಬಾಲೆಯಾಗಿ ಕುಮಾರಿ ವಿದ್ಯಾಶ್ರೀಯ ಹಾಗೂ ನಾಗಬ್ಬೆದ ರಮೇಶ್ ಜವನರೆಕಟ್ಟೆ ಇವರ ನಟನೆ ಉತ್ತಮವಾಗಿತ್ತು. ಭೂತಾರಾಧನೆಯ ವೈಭವೀಕರಣವೇ ಇಲ್ಲಿ ಪ್ರಮುಖವಾಗಿದ್ದಂತೆ ಅನಿಸಿತು. ಮಾಣಿಬಾಲೆ ಹರೆಯಕ್ಕೆ ಕಾಲಿಟ್ಟದ್ದನ್ನು ತಿಳಿಸಲೆಂದು ಬಳಸಿದ ನೃತ್ಯ ಸಂಯೋಜನೆ ರಂಗದಲ್ಲಿ ಲವಲವಿಕೆ ತಂದಿತ್ತಾದರೂ 'ನಡುವೆ ಜುಮಾದಿ ಬಂಟನ ಪ್ರವೇಶ ಸಂದರ್ಭೋಚಿತ ವಾದದ್ದೆ?' ಎಂಬ ಪ್ರಶ್ನೆ ಎದ್ದಿತು. ನಿರ್ದೇಶಕ ರಮೇಶ ಕುಮಾರ್ ಶೆಟ್ಟಿಯವರು ಆಧುನಿಕ ಪ್ರಜ್ಞೆಯನ್ನು ಬೆಳಿಸಿಕೊಂಡಿದ್ದರೆ, ರಂಗಪರಿಕರದ ಬಳಕೆಯನ್ನು ಸಮರ್ಪಕವಾಗಿ ಮಾಡಿಕೊಂಡಿದ್ದರೆ ಈ ನಾಟಕ ಗೆಲ್ಲುತ್ತಿತ್ತು.

''ವ್ಯಾಸ ನೃತ್ಯರೂಪಕ''ದಲ್ಲಿ ಹೀಗೆ ಸಾಲುಗಳಿವೆ– ''ಉದ್ಯಾವರ ಮಾಧವ ಆಚಾರ್ಯರು ರಚಿಸಿ, ನಿರ್ದೇಶಿಸಿದ 'ವ್ಯಾಸ' ನೃತ್ಯರೂಪಕವು ಇತ್ತೀಚೆಗೆ ಉಡುಪಿಯ ರಾಜಾಂಗಣದಲ್ಲಿ ಸುಂದರವಾಗಿ ಅರಳಿತು. ರಾಮಕೃಷ್ಣ ಕೊಡಂಚ ಹಾಗೂ ಭ್ರಮರಿ ಶಿವಪ್ರಕಾಶ್ ಇವರು ತಮ್ಮ ಭಾವನಾತ್ಮಕ ನೃತ್ಯ ಅಭಿವ್ಯಕ್ತಿಯ ಮೂಲಕ ಪ್ರೇಕ್ಷಕರ ಮನಗೆದ್ದರು.''

ಕಾತ್ಯಾಯಿನಿ ಕುಂಜಿಬೆಟ್ಟು ಇವರು ಬಹಳ ಸೊಗಸಾದ ಕನ್ನಡದಲ್ಲಿ ವಿವಿಧ ವಿಮರ್ಶಾ ಲೇಖನಗಳನ್ನು ಬರೆದಿರುತ್ತಾರೆ. ಇವರ ಸಾಹಿತ್ಯ ತುಡಿತದ ಪ್ರೀತಿಯನ್ನು ಬಹಳವಾಗಿ ನಾವು ಅಭಿನಂದಿಸುತ್ತೇವೆ.

ಕೃತಿ : **'ಒಳದನಿಯ ಪಲುಕುಗಳು'**, ನಿರೂಪಣೆ : **ಕಾತ್ಯಾಯಿನಿ ಕುಂಜಿಬೆಟ್ಟು**, ಪ್ರಕಾಶಕನ : **ಶ್ರೀನಿವಾಸ ಪುಸ್ತಕ ಪ್ರಕಾಶನ, ಬೆಂಗಳೂರು** ಬೆಲೆ : **ರೂ.75/-**

## ಶ್ರೀಶಾರದಾ ದೇವಸ್ಥಾನ, ಶಾರದಾನಗರ, ಕುಂಜಿಬೆಟ್ಟು , ಉಡುಪಿ

**ಈ ತಿಂಗಳ ಕಾರ್ಯಕ್ರಮಗಳು**

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30ಕ್ಕೆ

ಪ್ರತಿ ಮಂಗಳವಾರ : **ಸೌಂದರ್ಯಲಹರಿ ಪಾರಾಯಣ** ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ

ಪ್ರತಿ ಶುಕ್ರವಾರ : **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ "**ಪಾರಾಯಣ**" ಸಂಜೆ ಗಂಟೆ 4-30ರಿಂದ

**ಸಂಕಷ್ಟಹರ ಚತುರ್ಥಿಯಂದು (ತಾ.23-07-2016) "ಸಾಮೂಹಿಕ ಗಣಹೋಮ" ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

**ತಾ.17-07-2016 ಮತ್ತು ತಾ.14-08-2016 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ತಾ.24-07-2016 ಮತ್ತು ತಾ.07-08-2016 ಪಂಚಮಿಯಂದು "ನಾಗದೇವರಿಗೆ ತನುಸೇವೆ" ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

## ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಶ್ರೀ ಶಾರದಾನಗರ, ಕುಂಜಿಬೆಟ್ಟು , ಉಡುಪಿ.

### ಅಂಬಲ್ಪಾಡಿ ಕೃಷ್ಣ ರಾವ್ ಸ್ಮಾರಕ ವಿದ್ಯಾರ್ಥಿ ಪುರಸ್ಕಾರ 2016-17

ಉಡುಪಿ ಮತ್ತು ದ.ಕ. ಜಿಲ್ಲೆಗಳ ವಿಶ್ವವಿದ್ಯಾಲಯದಲ್ಲಿ ಕಲಿಯುವ ಸ್ನಾತಕೋತ್ತರ ಪದವಿಯಲ್ಲಿ ಎಲ್ಲಾ ವಿಷಯಗಳಲ್ಲಿ ರ್‍ಯಾಂಕ್ ಗಳಿಸಿದ ನಮ್ಮ ಸಮಾಜದ ಅರ್ಹ ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡಲಾಗುವುದು. ವಿದ್ಯಾರ್ಥಿಗಳು ತಮ್ಮ ಅರ್ಜಿಯನ್ನು ಬಿಳಿ ಹಾಳೆಯಲ್ಲಿ ಬರೆದು, ಅದರೊಟ್ಟಿಗೆ ರ್‍ಯಾಂಕ್ ಸಿಕ್ಕಿದ ಬಗ್ಗೆ ಸೂಕ್ತ ವಿವರದೊಂದಿಗೆ **ತಾ.24-09-2016**ರೊಳಗೆ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ ಇಲ್ಲಿಗೆ ಕಳುಹಿಸಬೇಕಾಗಿ ವಿನಂತಿ.

**- ಅಧ್ಯಕ್ಷರು, ವಿದ್ಯಾರ್ಥಿವೇತನ, ಶಿಕ್ಷಣ ಮತ್ತು ತರಬೇತಿ ವೇದಿಕೆ,**


## ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಶ್ರೀ ಶಾರದಾನಗರ, ಕುಂಜಿಬೆಟ್ಟು , ಉಡುಪಿ.


ವಿದ್ಯಾರ್ಥಿ ವೇತನ ವೇದಿಕೆ

### ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನ 2016-17

**ಪದವಿಪೂರ್ವ, ಪದವಿ, ಸ್ನಾತಕೋತ್ತರ, ಡಿ.ಎಡ್., ಬಿ.ಎಡ್., ಡಿಪ್ಲೋಮಾ, ಇಂಜಿನಿಯರಿಂಗ್, ವೈದ್ಯಕೀಯ, ವೇದ ತರಗತಿಗಳಲ್ಲಿ ಕಲಿಯುತ್ತಿರುವ, ಹೆತ್ತವರ ವಾರ್ಷಿಕ ಆದಾಯವು ರೂ.3,00,000ಕ್ಕೆ ಮೀರದ ವಿದ್ಯಾರ್ಥಿಗಳಿಂದ ವಿದ್ಯಾರ್ಥಿವೇತನಕ್ಕೆ ಅರ್ಜಿಯನ್ನು ಆಹ್ವಾನಿಸಲಾಗಿದೆ. ಹಿಂದಿನ ತರಗತಿಯ ಅಂಕಪಟ್ಟಿಯ ಪ್ರತಿ, ಪ್ರಸ್ತುತ ವರ್ಷದ ಶಾಲೆಯಿಂದ ವ್ಯಾಸಂಗ ಪ್ರಮಾಣ ಪತ್ರ, ಮತ್ತು ಬ್ಯಾಂಕಿನ ಪಾಸ್ ಪುಸ್ತಕದ ಮೊದಲನೇ ಪುಟದ ಪ್ರತಿಗಳ ದಾಖಲೆ ಸಹಿತ ಶ್ರೀಶಾರದಾ ಮಂಟಪದಲ್ಲಿ ಲಭ್ಯವಿರುವ ನಿಗದಿತ ಅರ್ಜಿ ಫಾರಂನಲ್ಲಿ ತಾ.24-09-2016ರ ಒಳಗೆ ಸಂಘದ ಕಛೇರಿಗೆ ಅರ್ಜಿಯನ್ನು ಕಳುಹಿಸಿ ಕೊಡಬೇಕು.**

- ಅಧ್ಯಕ್ಷರು, ವಿದ್ಯಾರ್ಥಿವೇತನ, ಶಿಕ್ಷಣ ಮತ್ತು ತರಬೇತಿ ವೇದಿಕೆ,



**ಈ ಎಲ್ಲಾ ಕಾರ್ಯಕ್ರಮಗಳಲ್ಲಿ ಭಾಗವಹಿಸಿ, ಚಾತುರ್ಮಾಸ್ಯ ನಿರತರಾಗಿರುವ ಶ್ರೀ ಶ್ರೀ ಮಾಧವಾಶ್ರಮ ಸ್ವಾಮೀಜಿಗಳವರನ್ನು ಭೇಟಿಯಾಗಿ ಆಶೀರ್ವಾದ ಪಡೆಯಲು ಸಮಾಜ ಬಾಂಧವರನ್ನು ವಿಶೇಷವಾಗಿ ಆಮಂತ್ರಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ ಶ್ರೀ ಪ್ರಕಾಶ್ ಕೋಲ್ಪೆ (9481267269)ಇವರನ್ನು ಸಂಪರ್ಕಿಸಬೇಕಾಗಿ ಕೋರುತ್ತೇವೆ.**

## ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಶ್ರೀ ಶಾರದಾನಗರ, ಕುಂಜಿಬೆಟ್ಟು , ಉಡುಪಿ.

### ಡಾ| ದಯಾನಂದ ಎಸ್. ರಾವ್ ಟ್ರಸ್ಟ್-ಸಾಲ ವಿದ್ಯಾರ್ಥಿ ವೇತನಕ್ಕೆ

### ಅರ್ಜಿ ಆಹ್ವಾನ : 2016-17

ಡಾ| ದಯಾನಂದ ಎಸ್. ರಾವ್ ಎಜ್ಯುಕೇಶನ್ ಟ್ರಸ್ಟ್, ಬೆಂಗಳೂರು, ಇವರು "ರತ್ನಾಬಾಯಿ ಸ್ಮಾರಕ ಸಾಲ ವಿದ್ಯಾರ್ಥಿವೇತನ"ಕ್ಕಾಗಿ ಉಡುಪಿ ಕುಂಜಿಬೆಟ್ಟಿನ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.)ಕ್ಕೆ ಸಾಲ ವಿದ್ಯಾರ್ಥಿವೇತನ ನೀಡಲು ನಗದು ಹಣವನ್ನು ಒದಗಿಸಿದ್ದಾರೆ. ಈ ಮೊಬಲಗನ್ನು ಟ್ರಸ್ಟ್‌ನ ನಿಬಂಧನೆಯಂತೆ ಕಲಿಕೆ ಸಮಯದಲ್ಲಿ ಬಡ್ಡಿ ರಹಿತ ಸಾಲ ರೂಪದಲ್ಲಿ ವಿದ್ಯಾರ್ಥಿಗಳಿಗೆ ನೀಡಲಾಗುವುದು. **2016-2017ನೇ** ಶೈಕ್ಷಣಿಕ ಸಾಲಿನಲ್ಲಿ ವೃತ್ತಿಪರ ತರಗತಿಗಳಿಗೆ ಸೇರಿದ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಇಂಜಿನಿಯರಿಂಗ್, ಮೆಡಿಕಲ್, ಇತ್ಯಾದಿ ತರಗತಿಗಳ ವಿದ್ಯಾರ್ಥಿಗಳಿಗೆ ಈ ಸಾಲ ವಿದ್ಯಾರ್ಥಿವೇತನವನ್ನು ನೀಡಲಾಗುವುದು. **ಅವರ ಅಗತ್ಯತೆ, ಆರ್ಥಿಕ ಸ್ಥಿತಿಗತಿ ಮತ್ತು ಪ್ರತಿಭೆಯನ್ನಾಧರಿಸಿ ಸಾಲ ಮಂಜೂರು ಮಾಡಲಾಗುವುದು.** ಸಾಲ ವಿದ್ಯಾರ್ಥಿ ವೇತನವನ್ನು ವಿದ್ಯಾರ್ಥಿಯ ಮುಂದಿನ ವರ್ಷಗಳ ಪ್ರಗತಿಯನ್ನು ಪರಿಶೀಲಿಸಿ ಪೂರ್ಣ ಅಧ್ಯಯನ ಅವಧಿಯಲ್ಲಿ ಮುಂದುವರಿಸಲಾಗುವುದು.

ಸಾಲ ವಿದ್ಯಾರ್ಥಿವೇತನವನ್ನು ಪಡೆಯಲು ಆಸಕ್ತಿಯುಳ್ಳ ವಿದ್ಯಾರ್ಥಿಗಳು **ನಿಗದಿತ ಅರ್ಜಿ ಫಾರಂನ್ನು** ಶಾರದಾ ಮಂಟಪ ಅಥವಾ ಶ್ರೀಶಾರದಾ ಕ್ರೆಡಿಟ್ ಕೋ-ಅಪರೇಟಿವ್ ಸೊಸೈಟಿಯಲ್ಲಿ ಪಡೆದು ಫಾರಂ ಭರ್ತಿ ಮಾಡಿ, ಪರೀಕ್ಷೆಯ ಅಂಕಪಟ್ಟಿ ಹಾಗೂ ವ್ಯಾಸಂಗ ಪ್ರಮಾಣ ಪತ್ರ ಮತ್ತಿತ್ತರ ದಾಖಲೆಗಳೊಂದಿಗೆ ಈ ಕೆಳಗಿನ ವಿಳಾಸಕ್ಕೆ **ತಾ.24-09-2016**ರ ಒಳಗೆ ತಲಪುವಂತೆ ಕಳುಹಿಸಬೇಕು.

**ವಿ.ಸೂ. : ಕಳೆದ ಸಾಲಿನಲ್ಲಿ ಸಾಲ ವಿದ್ಯಾರ್ಥಿ ವೇತನ ಪಡೆದುಕೊಂಡ ಅಭ್ಯರ್ಥಿಗಳು ನವೀಕರಣಕ್ಕಾಗಿ ಕಳೆದ ಸಾಲಿನ ತಮ್ಮ ವ್ಯಾಸಂಗದ ಪ್ರಗತಿಯ ವಿವರ ಹಾಗೂ ಪ್ರಸಕ್ತ ಸಾಲಿನ ವ್ಯಾಸಂಗ ಪ್ರಮಾಣ ಪತ್ರದ ಜೊತೆಗೆ ಅರ್ಜಿ ಸಲ್ಲಿಸಬೇಕು. ವ್ಯಾಸಂಗ ಪೂರೈಸಿದ ವಿದ್ಯಾರ್ಥಿಗಳು ಮರುಪಾವತಿಸುವ ಬಗ್ಗೆ ಶ್ರೀ ಶಾರದಾ ಮಂಟಪ (ಫೋನ್ : 0820-2520754) ಅಥವಾ ಶ್ರೀ ಶಾರದಾ ಕ್ರೆಡಿಟ್ ಕೋ-ಅಪರೇಟಿವ್ ಸೊಸೈಟಿಯಲ್ಲಿ ವಿಚಾರಿಸಬಹುದು.**

**-ಅಧ್ಯಕ್ಷರು, ವಿದ್ಯಾರ್ಥಿ ವೇತನ, ಶಿಕ್ಷಣ ಮತ್ತು ತರಗತಿ ವೇದಿಕೆ,**

## ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಶ್ರೀ ಶಾರದಾನಗರ, ಕುಂಜಿಬೆಟ್ಟು , ಉಡುಪಿ.

### ಉದಯಚಂದ್ರ ಪ್ರತಿಭಾ ಪುರಸ್ಕಾರ 2016-17

ಸಂಘದ ಯುವವೇದಿಕೆಯ ಆಶ್ರಯದಲ್ಲಿ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ನಮ್ಮ ಸಮಾಜದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಉದಯಚಂದ್ರ ಪ್ರತಿಭಾ ಪುರಸ್ಕಾರ ನೀಡಲಾಗುವುದು. 2015-16ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ. ಮತ್ತು ಪದವಿಪೂರ್ವ ಮೂರು ವಿಭಾಗಗಳಲ್ಲಿ ಅಂತಿಮ ಪರೀಕ್ಷೆಗಳಲ್ಲಿ ಅತಿ ಹೆಚ್ಚು ಅಂಕಗಳಿಸಿದ ಒಬ್ಬೊಬ್ಬ ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡಲಾಗುವುದು. ಪದವಿ, ಸ್ನಾತಕೋತ್ತರ, ವೈದ್ಯಕೀಯ, ಕಾನೂನು, ಇಂಜಿನಿಯರಿಂಗ್‌ಗಳಲ್ಲಿ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳನ್ನೂ ಪುರಸ್ಕರಿಸಲಾಗುವುದು. ಆದ್ದರಿಂದ ಶೇಕಡಾ 80ಕ್ಕಿಂತ ಹೆಚ್ಚು ಅಂಕ ಗಳಿಸಿದ ಮತ್ತು ರ್‍ಯಾಂಕ್ ವಿಜೇತ ವಿದ್ಯಾರ್ಥಿಗಳು ಅಂಕಪಟ್ಟಿಯ ಪ್ರತಿ, ವಿಳಾಸ, ಫೋನ್ ನಂಬ್ರ, ಇತ್ಯಾದಿ ದಾಖಲೆಗಳೊಂದಿಗೆ ಅರ್ಜಿಯನ್ನು ಅಧ್ಯಕ್ಷರು, ಯುವವೇದಿಕೆ, ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಶ್ರೀ ಶಾರದಾ ಮಂಟಪ, ಶಾರದಾನಗರ, ಕುಂಜಿಬೆಟ್ಟು ಉಡುಪಿ - 576 102 ಇಲ್ಲಿಗೆ **ತಾ.24-09-2016**ರೊಳಗೆ ಕಳುಹಿಸಿ ಕೊಡಬೇಕು.

**- ಅಧ್ಯಕ್ಷರು, ಯುವ ಮತ್ತು ಕ್ರೀಡಾ ವೇದಿಕೆ.**

## ಶ್ರೀ ಶಾಂಕರ ತತ್ವ ಪ್ರಸಾರ ಅಭಿಯಾನಂ, ಉಡುಪಿ ಜಿಲ್ಲೆ

**ಭಕ್ತಾಭಿಮಾನಿಗಳೇ**

**ಶ್ರೀಶೃಂಗೇರಿ ಜಗದ್ಗುರುಗಳ ಅಪ್ಪಣೆಯಂತೆ ಶ್ರೀಶಾಂಕರ ತತ್ವ ಪ್ರಸಾರ ಅಭಿಯಾನಂ ವತಿಯಿಂದ ಜುಲೈ 24ರ ಆದಿತ್ಯವಾರ ಬೆಳಿಗ್ಗೆ 10ಗಂಟೆಗೆ ಶ್ರೀಶಾರದಾ ದೇವಸ್ಥಾನ, ಕುಂಜಿಬೆಟ್ಟು, ಉಡುಪಿ ಇಲ್ಲಿ**

### ಗುರು ಪೌರ್ಣಿಮೆ ಆಚರಣೆ

**ಮಾಡುವುದೆಂದು ನಿಶ್ಚಯಿಸಲಾಗಿದೆ. ಸಮಾಜ ಬಾಂಧವರು ಅಧಿಕ ಸಂಖ್ಯೆಯಲ್ಲಿ ಭಾಗವಹಿಸಿ, ಗುರುಗಳ ಕೃಪೆಗೆ ಪಾತ್ರರಾಗಲು ಕೋರುತ್ತೇವೆ.**

**ಎಲ್ಲರಿಗೂ ಸ್ವಾಗತ ಬಯಸುವ :-**

**-ಶ್ರೀ ಯು.ಪ್ರಫುಲ್ಲಚಂದ್ರ ರಾವ್, ಸಂಚಾಲಕರು**



**ಎಮ್. ದೇವಾನಂದ್ ಭಟ್** Cell : 9845644556, 9483913344



ಶೋಭಾ ಡಿಜಿಟಲ್
ಸ್ಟುಡಿಯೋ & ವೀಡಿಯೊ

ಬೆಳ್ವಾಯಿ-574213 (08258)-276177 (O)
ಮೂಡಬಿದ್ರಿ, ಲಾವಂತ ಕಾಂಪ್ಲೆಕ್ಸ್ 9901995655
ಎಡಪದವು - 574 164 (0824)-2256374 (O) ಮಂಗಳೂರು, ದ.ಕ.

ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

**Smt. Nagaveni Ullas**
Proprietor
Mobile : 9741626190
E-mail : rao.ullas@yahoo.co.in

**RAMDEV ENTERPRISES**

"Ramdev", Opp. Balaganapathi Temple, Padubidri-574111, Udupi Dist.

**Authorised Distributor For :**
1. KEYA-Amalgam Speciality Foods (I) Pvt. Ltd.
2. Swastiks-Vishnu Masala Food Pvt. Ltd.
3. Agarbathi, Loban & Camphor-Stockists

# ಜಗದ್ಗುರುಗಳವರ ಚಾತುರ್ಮಾಸ್ಯ ವ್ರತ

-ಡಾ। ಎಚ್.ವಿ.ನರಸಿಂಹಮೂರ್ತಿ, ಕುಂದಾಪುರ

‘ಚಾತುರ್ಮಾಸ್ಯ’ ಎಂಬ ಶಬ್ದವೇ ಸೂಚಿಸಿದಂತೆ ‘ನಾಲ್ಕು ತಿಂಗಳ ವ್ರತ’ ಎಂಬುದು ಇದರ ಸಾಮಾನ್ಯಾರ್ಥ. ಆದರೆ ‘ಪಕ್ಷೋವೈ ಮಾಸಃ’ ಎಂಬ ಶ್ರುತಿ ವಾಕ್ಯಕ್ಕನುಗುಣವಾಗಿ ಒಂದು ಪಕ್ಷವನ್ನೇ ಒಂದು ತಿಂಗಳೆಂದು ಭಾವಿಸಿದಾಗ ಇದು ನಾಲ್ಕು ಪಕ್ಷಗಳೆಂಬ ಅರ್ಥವನ್ನು ಕೊಡುತ್ತದೆ. ಯತಿಗಳು ಪರಿವ್ರಾಜಕರು; ಅವರು ಸ್ವಧರ್ಮದಂತೆ ದೇಶ ಸಂಚಾರ ಮಾಡುತ್ತಿರುತ್ತಾರೆ. ಆದರೆ ಮಳೆಗಾಲದಲ್ಲಿ ಅವರು ಸಂಚಾರ ಮಾಡಬಾರದು. ಇದಕ್ಕೆ ಕಾರಣ ಅಹಿಂಸೆಯ ಪರಿಪಾಲನೆ. ಆಷಾಢದ ಮಳೆಗೆ ಎಲ್ಲೆಲ್ಲೂ ಕ್ರಿಮಿಕೀಟಗಳು ಹುಟ್ಟಿಕೊಂಡಿರುತ್ತವೆ. ಕೃಷಿಕರು ಬಿತ್ತನೆ ಆರಂಭಿಸುತ್ತಾರೆ. ಅನೇಕ ಬಗೆಯ ಸಸ್ಯಗಳು ಮೊಳಕೆಯೊಡೆದು, ಭೂಮಿಯನ್ನು ಭೇದಿಸಿ ಹುಟ್ಟಿಕೊಳ್ಳುತ್ತವೆ. ನಿರಂತರ ಮಳೆಯಿಂದಾಗಿ ಭೂಮಿಯೂ ಮೆದುವಾಗುತ್ತದೆ. ಹಾಗಾಗಿ ಆಗ ಸಂಚರಿಸಿದರೆ ತಿಳಿದೋ, ತಿಳಿಯದೆಯೋ ಹಿಂಸೆ ಮಾಡಿದಂತಾಗುತ್ತದೆ. ಅಹಿಂಸೆ ಸನ್ಯಾಸಾಶ್ರಮಿಯ ಪ್ರಮುಖ ವ್ರತ. ಚಾತುರ್ಮಾಸ್ಯ ಸಂಕಲ್ಪದಲ್ಲಿ ಹೇಳುವಂತೆ ‘ಸಾಮಾನ್ಯವಾಗಿ ಮಳೆಗಾಲದಲ್ಲಿ ದಾರಿ ಅನೇಕ ಸೂಕ್ಷ್ಮಜೀವಿಗಳಿಂದ ತುಂಬಿರುತ್ತದೆ. ಅವುಗಳಿಗೆ ಹಿಂಸೆ ಮಾಡಬಾರದಾದ್ದರಿಂದ ಶ್ರುತಿಸಮ್ಮತವಾದ ನಾಲ್ಕು ಪಕ್ಷಗಳ ಕಾಲ ಒಂದೇ ಸ್ಥಳದಲ್ಲಿ ಇರುತ್ತೇನೆ’. (ಪ್ರಾಯೇಣ ಪ್ರಾವೃಷಿ ಪ್ರಾಣಿಸಂಕುಲಂ ವರ್ತ್ಮದೃಶ್ಯತೇ । ಅತಸ್ತೇಷಾಂ ಅಹಿಂಸಾರ್ಥಂ ಪಕ್ಷಾನ್ ವೈ ಶ್ರುತಿ ಸಂಶ್ರಯಾನ್, ಸ್ಥಾಸ್ಯಾಮಶ್ಚತುರೋ ಮಾಸಾನ್... ॥) ಎಂದು ಈ ವ್ರತವನ್ನು ಆರಂಭಿಸಲು ಸಂಕಲ್ಪಿಸುತ್ತಾರೆ. ಆದ್ದರಿಂದ ಯತಿಗಳು ಪಾಲಿಸಬೇಕಾದ ಅಹಿಂಸಾಧರ್ಮವೇ ಚಾತುರ್ಮಾಸ್ಯ ವ್ರತಕ್ಕೆ ಮೂಲ ಕಾರಣ.

ಚಾತುರ್ಮಾಸ್ಯ ವ್ರತಕ್ಕೆ ಇನ್ನೊಂದು ಕಾರಣವೂ ಇದೆ. ಸೃಷ್ಟಿಕರ್ತನಾದ ಮಹಾವಿಷ್ಣುವು ಆಷಾಢ ಮಾಸದಿಂದ ಕಾರ್ತಿಕಮಾಸದವರೆಗೆ ಅಂತರ್ಮುಖಿಯಾಗಿ ದಿವ್ಯನಿದ್ರೆಯಲ್ಲಿ ಮಗ್ನನಾಗಿರುತ್ತಾನೆ. ಆ ಸಮಯದಲ್ಲಿ ಯತಿಗಳಾದವರು ಅಂತರ್ಮುಖಿಗಳಾಗಿ ತಮ್ಮ ಸಾಧನೆಯಲ್ಲಿ ಹೆಚ್ಚು ತೊಡಗಬೇಕು. ಹಾಗೆ ಮಾಡಿದಾಗ ಸಮಾಜ ಹಸನಾಗಲು ಸಾಧ್ಯ; ಸಾತ್ವಿಕ ಶಕ್ತಿಯ ಸಂಚಾರ ಎಲ್ಲೆಡೆ ಆಗಲು ಸಾಧ್ಯ.

**ವ್ಯಾಸ ಪೂರ್ಣಿಮಾ :**

ಪುಣ್ಯಪ್ರದವಾದ ಆಷಾಢಶುದ್ಧ ಹುಣ್ಣಿಮೆಯನ್ನು ‘ವ್ಯಾಸಪೂರ್ಣಿಮಾ’ ಅಥವಾ ‘ಗುರುಪೂರ್ಣಿಮಾ’ ಎಂದು ಕರೆಯುತ್ತಾರೆ. ಏಕೆಂದರೆ ಬ್ರಹ್ಮವಿದ್ಯೆಯನ್ನು ಉಪದೇಶಿಸಿದ ಗುರುಪರಂಪರೆಯಲ್ಲಿ ಭಗವಾನ್ ವೇದವ್ಯಾಸರು ಅಗ್ರಗಣ್ಯರು. ‘ವೇದಾನ್ ವಿದ್ಯಾಸಯಸ್ಮಾತ್ಸಃ ವೇದವ್ಯಾಸ ಇತೀರಿತಃ’ ಎಂಬಂತೆ ಅನಂತವಾದ ವೇದವನ್ನು ನಾಲ್ಕು ವಿಭಾಗಗಳನ್ನಾಗಿ ವಿಭಾಗಿಸಿದ್ದರಿಂದಲೇ ಅವರನ್ನು ‘ವೇದವ್ಯಾಸ’ ಎಂದು ಕರೆಯಲಾಗುತ್ತದೆ. ಪಂಚಮವೇದವೆಂದೇ ಪ್ರಸಿದ್ಧವಾದ ಮಹಾಭಾರತ, ಅಷ್ಟಾದಶ ಪುರಾಣಗಳು, ಪ್ರಸ್ಥಾನತ್ರಯಗಳಲ್ಲಿ ಒಂದಾದ ಬ್ರಹ್ಮಸೂತ್ರ-ಇವುಗಳನ್ನೆಲ್ಲ ರಚಿಸಿದವರು ಅವರು. ಆದ್ದರಿಂದ ಗುರುಪೂರ್ಣಿಮೆಯೆಂದು ಪವಿತ್ರಭಾರತದ ಎಲ್ಲ ಸಂಪ್ರದಾಯಗಳ ಯತಿಪರಂಪರೆಯವರೂ ಅವರನ್ನು ವಿಶೇಷವಾಗಿ ಪೂಜಿಸುತ್ತಾರೆ.

ಚಾತುರ್ಮಾಸ್ಯ ವ್ರತವು ಆರಂಭವಾಗುವುದು ಈ ಗುರು ಪೂರ್ಣಿಮೆಯಂದು. ವ್ರತನಿರತರಾದ ಯತಿಗಳು ಈ ಕಾಲದಲ್ಲಿ ತಮ್ಮ ಸಾಧನೆ-ತಪಸ್ಸುಗಳ ನೆಲಗಟ್ಟನ್ನು ಭದ್ರಗೊಳಿಸಲು ಅಧ್ಯಯನ-ಅಧ್ಯಾಪನಗಳ ಮೂಲಕ, ಯಮ-ನಿಯಮಾದಿ ಯೋಗಸಾಧನೆಗಳ ಮುಖಾಂತರ ಮತ್ತು ಶಾಸ್ತ್ರೋಕ್ತ ವ್ರತೋಪವಾಸಗಳಿಂದ ಚಂಚಲವಾದ ಮನಸ್ಸನ್ನು ನಿರ್ದಿಷ್ಟ ಸಾಧನೆಯತ್ತ ಒಯ್ಯುವ ಪ್ರಯತ್ನದಲ್ಲಿ ನಿರತರಾಗುತ್ತಾರೆ. ‘ಸರಳ ಜೀವನ-ಉನ್ನತ ಚಿಂತನ’ ಅವರದಾಗಿರುತ್ತದೆ. ಅಧ್ಯಯನ-ಅಧ್ಯಾಪನ ಮತ್ತು ಅನುಷ್ಠಾನಗಳತ್ತ ತಮ್ಮ ಗಮನವನ್ನು ವಿಶೇಷವಾಗಿ ಹರಿಸುತ್ತಾರೆ.

**ಜಗದ್ಗುರುಗಳವರ ಚಾತುರ್ಮಾಸ್ಯ ವ್ರತ :**

ದಕ್ಷಿಣಾಮ್ನಾಯ ಶೃಂಗೇರಿ ಶ್ರೀ ಶಾರದಾಪೀಠದಲ್ಲಿ ಚಾತುರ್ಮಾಸ್ಯ ವ್ರತದ ಪ್ರಕ್ರಿಯೆಗಳನ್ನು ಆರಂಭಿಸುವ ಮೊದಲು ಜಗದ್ಗುರುಗಳವರು ಆಷಾಢಮಾಸದ ಶುಕ್ಲಪಕ್ಷದ ಪ್ರದೋಷ ದಿನದಂದು ಪೂರ್ವ ಸಂಪ್ರದಾಯದಂತೆ ಸಂಜೆಹೊತ್ತು ಮಲ್ಲಿಕಾರ್ಜುನ ಬೆಟ್ಟಕ್ಕೆ ವೇದಘೋಷದೊಂದಿಗೆ ತೆರಳಿ ಶ್ರೀ ಮಲಹಾನಿಕರ ಸ್ವಾಮಿಯ ದರ್ಶನ ಮಾಡುತ್ತಾರೆ. ವ್ಯಾಸ ಪೂರ್ಣಿಮೆಯಂದು ಬೆಳಗ್ಗೆ ಶ್ರೀಮಠದ ಆವರಣದಲ್ಲಿರುವ ಎಲ್ಲ ದೇವಾಲಯಗಳಿಗೂ ಚಿತ್ತೈಸಿ, ದೇವರದರ್ಶನ ಮಾಡಿದ ನಂತರ ಪೂಜಾಭವನದ ಕಡೆಗೆ ಆಗಮಿಸುತ್ತಾರೆ. ಅಷ್ಟು ಹೊತ್ತಿಗಾಗಲೇ ಸಹಸ್ರಾರು ಮಂದಿ ಭಕ್ತರು ಈ ಪೂಜಾಮಂದಿರದಲ್ಲಿ ದಟ್ಟೈಸಿರುತ್ತಾರೆ. ಈ ಮಂದಿರದಲ್ಲಿನ ವ್ಯಾಸಮಂಟಪವನ್ನು ವಿಶೇಷವಾಗಿ ಅಲಂಕರಿಸಿರುತ್ತಾರೆ. ಸೇರಿದ ಭಕ್ತರೆಲ್ಲ ಮೈಯೆಲ್ಲ ಕಣ್ಣಾಗಿ ಶ್ರೀಶ್ರೀಗಳವರ ಆಗಮನ ಮತ್ತು ಪೂಜಾವಿಧಿ ವಿಧಾನಗಳನ್ನು ವೀಕ್ಷಿಸಲು ಸಜ್ಜಾಗಿರುತ್ತಾರೆ.

ಜಗದ್ಗುರುಗಳವರು ಮಾಡುವ ಈ ಪೂಜೆಯಲ್ಲಿ ಮೂರು ಗುಂಪುಗಳ ಗುರುಪರಂಪರೆಗೆ ಪ್ರಾಧಾನ್ಯ. ಒಂದೊಂದು ಗುಂಪಿನಲ್ಲಿ ಐವರು ಆಚಾರ್ಯರು. ಈ ಗುಂಪುಗಳಿಗೆ ಕೃಷ್ಣಪಂಚಕ, ವ್ಯಾಸ ಪಂಚಕ, ಆಚಾರ್ಯ ಪಂಚಕ - ಎಂದು ಹೆಸರು. ಶ್ರೀ ಕೃಷ್ಣ ಸನಕ, ಸನಂದನ, ಸನತ್ಕುಮಾರ ಮತ್ತು ಸನತ್ಸುಜಾತ-ಇವರು ಕೃಷ್ಣ ಪಂಚಕದಲ್ಲಿ ಸೇರುತ್ತಾರೆ. ವ್ಯಾಸಪಂಚಕದಲ್ಲಿ ಶ್ರೀವೇದವ್ಯಾಸರು ಜೈಮಿನಿ ಮಹರ್ಷಿ, ಪೈಲಮಹರ್ಷಿ, ವೈಶಂಪಾಯನ ಮಹರ್ಷಿ ಮತ್ತು ಸುಮಂತು ಮಹರ್ಷಿಗಳನ್ನೂ, ಆಚಾರ್ಯ ಪಂಚಕದಲ್ಲಿ ಶ್ರೀ ಶಂಕರಾಚಾರ್ಯ ಮತ್ತು ಅವರ ಶಿಷ್ಯರಾದ ಸುರೇಶ್ವರಾಚಾರ್ಯ, ಹಸ್ತಮಲಕಾಚಾರ್ಯ, ತೋಟಕಾಚಾರ್ಯ ಮತ್ತು ಪದ್ಮಪಾದಾಚಾರ್ಯರನ್ನೂ ಪೂಜಿಸಲಾಗುತ್ತದೆ. ಶೃಂಗೇರಿ ಶ್ರೀಮಠದ ಪರಂಪರಾಗತ ಸಂಪ್ರದಾಯದಂತೆ ಶ್ರೀಶ್ರೀಗಳವರು ಈ ಮೂರು ಪಂಚಕಗಳಿಗೂ ಪ್ರತ್ಯೇಕವಾಗಿ ಪೂಜೆಗಳನ್ನು ಸಲ್ಲಿಸುತ್ತಾರೆ. ಈ ಪೂಜೆಯ ನಂತರ ಅವರು ಶೃಂಗೇರಿ ಜಗದ್ಗುರು ಪರಂಪರಾಸ್ತೋತ್ರವನ್ನು ಪಠಿಸುತ್ತಾ, ಗುರು ಪರಂಪರೆಯ ಎಲ್ಲ ಯತಿಗಳನ್ನು ಪೂಜಿಸುತ್ತಾರೆ.

ಶ್ರೀಗುರು ಪರಂಪರೆಯು ಪ್ರಾರಂಭವಾಗುವುದು ಸದಾಶಿವನಿಂದ. ನಂತರ ಶ್ರೀ ಮಹಾವಿಷ್ಣು, ಶ್ರೀ ಚತುರ್ಮುಖಬ್ರಹ್ಮ, ಶ್ರೀ ವಸಿಷ್ಠಮಹರ್ಷಿ, ಶ್ರೀ ಶಕ್ತಿಮಹರ್ಷಿ, ಶ್ರೀ ಪರಾಶರ ಮಹರ್ಷಿ, ಶ್ರೀ ವೇದವ್ಯಾಸಮಹರ್ಷಿ, ಶ್ರೀ ಶುಕಮಹರ್ಷಿ, ಶ್ರೀ ಗೌಡಪಾದಾಚಾರ್ಯರು, ಶ್ರೀ ಗೋವಿಂದ ಭಗವತ್ಪಾದಾಚಾರ್ಯರು ಮತ್ತು ಶ್ರೀಆದಿಶಂಕರಾಚಾರ್ಯರ ನಂತರ ಶೃಂಗೇರಿ ಶ್ರೀಶಾರದಾಪೀಠದ ಮೊದಲ ಗುರುಗಳಾದ ಶ್ರೀಸುರೇಶ್ವರಾಚಾರ್ಯರಿಂದ ಮೊದಲ್ಗೊಂಡು ನಿಕಟಪೂರ್ವ ಗುರುಗಳಾದ ಶ್ರೀ ಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳವರೆಗೆ ಮೂವತ್ತೈದು ಮಂದಿ ಯತಿವರೇಣ್ಯರಿಗೆ ಪ್ರಸ್ತುತ ಪೀಠಾಧಿಪತಿಗಳಾಗಿರುವ ಶ್ರೀ ಭಾರತೀತೀರ್ಥ ಸ್ವಾಮಿಗಳವರು ಪೂಜೆ ಸಲ್ಲಿಸುತ್ತಾರೆ.

ಈ ವ್ಯಾಸಪೂಜಾವಿಧಿ ಮುಗಿದ ನಂತರ ಶ್ರೀಶ್ರೀಗಳವರು ಹಿಂದೆ ಹೇಳಲಾದಂತೆ ಪರಿವ್ರಾಜಕರಾದ ತಾವು ನಾಲ್ಕು ತಿಂಗಳ ಕಾಲ ಒಂದೇ ಸ್ಥಳದಲ್ಲಿ ಇರಲು ಕಾರಣ ತಿಳಿಸಿ, ‘ನಾವು ಇಲ್ಲಿ ಇದ್ದು ವ್ರತ ಕೈಗೊಳ್ಳುತ್ತೇವೆ’ ಎಂದು ಸಂಕಲ್ಪ ಮಾಡುತ್ತಾರೆ. ಆಗ ಶ್ರೀಮಠದ ಶಿಷ್ಯರು ‘ಗುರುಗಳು ಸುಖವಾಗಿ ಇಲ್ಲಿ ವಾಸಮಾಡಬೇಕು. ಇದರಿಂದ ನಾವೆಲ್ಲರೂ ಕೃತಾರ್ಥರಾಗುತ್ತೇವೆ. ಚಾತುರ್ಮಾಸ್ಯದ ಅವಧಿಯಲ್ಲಿ ನಾವೆಲ್ಲರೂ ಯಥಾಶಕ್ತಿ ಗುರುಸೇವೆ ಮಾಡುತ್ತೇವೆ.’ (ನಿವಸಂತು ಸುಖೇನಾತ್ರ ಗಮಿಷ್ಯಾಮಃ ಕೃತಾರ್ಥತಾಮ್ ಯಥಾವಿಹಿತ ಶುಶ್ರೂಷಾಂ ಕರಿಷ್ಯಾಮೋವಯಂ ಮುದಾ)-ಎಂದು ಧನ್ಯತಾಭಾವದಿಂದ ವಿನಂತಿಸಿಕೊಳ್ಳುತ್ತಾರೆ.

ಸಂಕಲ್ಪದ ನಂತರ ಶ್ರೀ ಶ್ರೀಗಳವರ ಪಾದುಕೆಗಳಿಗೆ ಶ್ರೀ ಮಠದ ಪುರೋಹಿತರು ಪೂಜೆ ಸಲ್ಲಿಸುತ್ತಾರೆ. ಶೃಂಗೇರಿ ಸಚ್ಚಿದಾನಂದಪುರ, ನರಸಿಂಹಪುರ ಮತ್ತು ವಿದ್ಯಾರಣ್ಯಪುರದ ಮಹಾಜನರು ಶ್ರೀ ಶ್ರೀಗಳವರಿಗೆ ಕಾಣಿಕೆಯನ್ನು ಸಮರ್ಪಿಸುತ್ತಾರೆ. ಆಡಳಿತಾಧಿಕಾರಿಗಳು ಶ್ರೀ ಮಠಕ್ಕೆ ದತ್ತಿಕಾಣಿಕೆಗಳನ್ನು ನೀಡಿದ ಮಹಾರಾಜರ ಹೆಸರಿನಲ್ಲಿ ಶ್ರೀಶ್ರೀಗಳವರಿಗೆ ಕಾಣಿಕೆಗಳನ್ನು ಸಮರ್ಪಿಸಿ ಸಾಷ್ಟಾಂಗಪ್ರಣಾಮಗಳನ್ನು ಸಲ್ಲಿಸುತ್ತಾರೆ. ಇದಾದ ನಂತರ ಶ್ರೀಶ್ರೀಗಳವರು ನೆರೆದ ಶಿಷ್ಯರೆಲ್ಲರಿಗೂ ತೀರ್ಥ ನೀಡುತ್ತಾರೆ. ಶ್ರೀಮಠೀಯ ಯಾಗ ಶಾಲೆಯಲ್ಲಿ ಶ್ರೀ ಲಲಿತಾಹೋಮ, ಶಾರದಮ್ಮನವರ ಸನ್ನಿಧಿಯಲ್ಲಿ ಲಕ್ಷಮಲ್ಲಿಕಾರ್ಚನೆಯ ಉದ್ಯಾಪನೆ ನಡೆಯುತ್ತದೆ. ಮರುದಿನ ಪುನಃ ಶ್ರೀಶ್ರೀಗಳವರಿಂದ ಗುರುಪರಂಪರೆಗೆ ಪೂಜೆ ನಡೆಯುತ್ತದೆ. ನಂತರ ಎಲ್ಲರಿಗೂ ಪ್ರಸಾದ ವ್ಯಾಸಾಕ್ಷತೆಯನ್ನು ಅನುಗ್ರಹಿಸುತ್ತಾರೆ.

ಚಾತುರ್ಮಾಸ್ಯ ಅವಧಿಯ ಪ್ರತೀ ಶ್ರಾವಣ ಸೋಮವಾರ ಮಧ್ಯಾಹ್ನ ಜಗದ್ಗುರುಗಳವರು ತಮ್ಮ ಆರಾಧ್ಯದೇವರಾದ ಶ್ರೀ ಚಂದ್ರಮೌಳೀಶ್ವರ ಸ್ವಾಮಿಗೆ ವಿಶೇಷ ಪೂಜೆ ನೆರವೇರಿಸುತ್ತಾರೆ. ಶ್ರೀ ಮಠದ ಪಂಚಾಂಗದಲ್ಲಿ ಸೂಚಿಸಲಾದ ದಿನಗಳಂದು ಶ್ರೀ ಕೃಷ್ಣ ಜನ್ಮಾಷ್ಟಮಿ, ಸ್ವರ್ಣಗೌರಿ, ವಿನಾಯಕ ಚತುರ್ಥಿ, ಕೇದಾರನವಮಿ, ವಾಮನಜಯಂತಿ, ಅನಂತಪದ್ಮನಾಭ ವ್ರತ, ಉಮಾಮಹೇಶ್ವರ ವ್ರತ-ಮೊದಲಾದವುಗಳನ್ನು ನಡೆಸುವುದಲ್ಲದೆ ಭಾದ್ರಪದ ಚತುರ್ಥಿಯಿಂದ ಪೂರ್ಣಿಮಾ ಪರ್ಯಂತ ಶ್ರೀ ಜಗದ್ಗುರುಗಳವರ ದಿವ್ಯ ಅಧ್ಯಕ್ಷತೆಯಲ್ಲಿ ಸಮಗ್ರ ಭಾರತದಲ್ಲೇ ಅದ್ವಿತೀಯವೆನ್ನಬಹುದಾದ ಶ್ರೀ ಮಹಾಗಣಪತಿ ವಾಕ್ಯಾರ್ಥವಿದ್ವತ್ಸಭೆಯು ನಡೆಯುತ್ತದೆ. ಶ್ರೀಮಠದ ಪರಂಪರಾಗತ ಶಿಷ್ಯರು, ಸಾಮೂಹಿಕವಾಗಿ ಬಂದು ಚಾತುರ್ಮಾಸ್ಯ ನಿರತರಾದ ಜಗದ್ಗುರುಗಳವರ ದರ್ಶನ ಪಡೆದು ಪಾದಪೂಜೆ, ಭಿಕ್ಷಾವಂದನೆ ಮೊದಲಾದ ಸೇವೆಗಳನ್ನು ಸಲ್ಲಿಸಿ, ಗುರುಗಳವರಿಂದ ಆಶೀರ್ವಾದ ಪಡೆಯುತ್ತಾರೆ. ಇಷ್ಟೊಂದು ಅರ್ಥಪೂರ್ಣವಾದ ಚಾತುರ್ಮಾಸ್ಯ ವ್ರತವು ಭಾದ್ರಪದ ಹುಣ್ಣಿಮೆಯಂದು ಸೀಮೋಲ್ಲಂಘನದೊಂದಿಗೆ ಮುಕ್ತಾಯಗೊಳ್ಳುತ್ತದೆ.

ಪೂರ್ವಪರಂಪರೆಗೆ ಕಿಂಚಿತ್ತೂ ಚ್ಯುತಿ ಬಾರದಂತೆ ಶಾಸ್ತ್ರೋಕ್ತವಾಗಿ ಚಾತುರ್ಮಾಸ್ಯ ವ್ರತವನ್ನು ಆಚರಿಸುವವರು ಪ್ರಾಯಶಃ ಶೃಂಗೇರಿ ಶ್ರೀ ಶಾರದಾಪೀಠದ ಅವಿಚ್ಛಿನ್ನ ಪರಂಪರೆಯ ಗುರುಗಳು ಮಾತ್ರ. ತಮ್ಮ ಧರ್ಮಯಾತ್ರೆಗಳ ಸಂದರ್ಭದಲ್ಲೂ ಸೂಕ್ತವಾದ ಸ್ಥಳಗಳನ್ನು ಮೊದಲೇ ಆಯ್ಕೆ ಮಾಡಿ, ಸಕಲ ಸಿದ್ಧತೆಗಳೊಂದಿಗೆ ಶೃಂಗೇರಿಯಲ್ಲಿ ಹೇಗೋ ಹಾಗೆಯೇ ಅಲ್ಲೂ ಈ ವ್ರತವನ್ನು ಸ್ವಲ್ಪವೂ ಲೋಪವಾಗದಂತೆ ಆಚರಿಸುತ್ತಿರುವುದು ಶೃಂಗೇರಿ ಧರ್ಮಸಂಸ್ಥಾನದ ವೈಶಿಷ್ಟ್ಯಗಳಲ್ಲೊಂದು.





RAJESH POWER PRESS
PRINTERS & PUBLISHERS
DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com
QUALITY FIRST AND ALWAYS

With Best Complimemts From
SRI M. SHAILESH RAO
Ph : 9448624324
B.E., Civil
Civil Engineer & Contractor
SRI MALAVIKA ASSOCIATES
KALSANKA-UDUPI ROAD, UDUPI.
Website : shreemaalavikaassociates.com

With Best Compliments From :
Ph : 98459 92859
Ganesh Hebbar & Associates
CHARTERED ACCOUNTANT
S.M.S.P. Complex, Udupi - 576 101.

ದೇವಿಕೃಪಾ ಏಜೆನ್ಸೀಸ್, ನಂದಿಕೂರು
ಫೋನ್ : 2556536 (R), 2555466 (O), Mobile : 9845149521

ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.
ಪ್ರೊ। ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು



ಕಾಸರಗೋಡಿನಲ್ಲಿರುವ ಅದ್ಯಪಾಡಿ ಕುಮಾರಸ್ವಾಮಿ ಹಾಗೂ ಪ್ರಸನ್ನ ಕುಮಾರಿ ದಂಪತಿಗಳ ಪುತ್ರ, ಕಾಸರಗೋಡಿನ ಕೇಂದ್ರಿಯ ವಿದ್ಯಾಲಯದ ವಿದ್ಯಾರ್ಥಿ **ಆತ್ಮೀಯ ಕೃಷ್ಣ ಎ.** ಇವನು 2016ನೇ ಸಾಲಿನ ಕೇಂದ್ರ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯ 10ನೇ ತರಗತಿಯ ಪರೀಕ್ಷೆಯಲ್ಲಿ 10ಸಿಜಿಪಿಎ ಅಂಕ ಗಳಿಸಿ ಉತ್ತೀರ್ಣನಾಗಿದ್ದಾನೆ.



ಮಂಗಳೂರಿನ ಶ್ರೀ ಯು. ಸಂತೋಷ್ ರಾವ್ ಮತ್ತು ಶ್ರೀಮತಿ ರಜನಿಯವರ ಪುತ್ರಿ ಹಾಗೂ ಕೆನರಾ ಪ್ರೌಢಶಾಲೆಯ ವಿದ್ಯಾರ್ಥಿನಿಯಾದ **ಸಿಂಧು ರಾವ್** ಎಸ್.ಎಸ್.ಎಲ್.ಸಿ 613/625 ಅಂಕ ಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ.



ಪುತ್ತೂರಿನ ಶ್ರೀ. ಸುರೇಶ್ ಎನ್. ಎಮ್. ಹಾಗೂ ಶ್ರೀಮತಿ ವಿಜಯಾ ದಂಪತಿಯ ಪುತ್ರಿಯಾದ **ಕು| ಶ್ರದ್ಧಾ ಎನ್. ಎಮ್.** ಇವಳು 2016ನೇ ಸಾಲಿನ ಪಿ.ಯು.ಸಿ (ವಿಜ್ಞಾನ) ಪರೀಕ್ಷೆಯಲ್ಲಿ 587 ಅಂಕಗಳನ್ನು ಗಳಿಸಿ ಪುತ್ತೂರಿನ ವಿವೇಕಾನಂದ ಪದವಿ ಪೂರ್ವ ಕಾಲೇಜಿನಲ್ಲಿ ಪ್ರಥಮ ಸ್ಥಾನಿಯಾಗಿದ್ದಾಳೆ. ಇವಳು ಸಿಇಟಿಯ ಮೆಡಿಕಲ್ ನಲ್ಲಿ 561 ಹಾಗೂ ಆಯುರ್ವೇದದಲ್ಲಿ 261 ರ್‍ಯಾಂಕನ್ನು ಗಳಿಸಿರುತ್ತಾರೆ.



ಮಂಗಳೂರಿನ ಕುಲಶೇಖರದಲ್ಲಿರುವ ಸೈಂಟ್ ಜೋಸೆಫ್ ಶಾಲೆಯ ವಿದ್ಯಾರ್ಥಿ ಹಾಗೂ ಶ್ರೀ ಪ್ರಶಾಂತ್ ರಾವ್ ಮತ್ತು ಶ್ರೀಮತಿ ಹರಿಣಾಕ್ಷಿ ರಾವ್ ವಾಮಂಜೂರು ಇವರ ಪುತ್ರ **ಪ್ರಣೀತ್ ರಾವ್** 2015-16ನೇ ಸಾಲಿನ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ 611 (98%) ಅಂಕಗಳನ್ನು ಗಳಿಸಿ ಉತ್ತೀರ್ಣನಾಗಿದ್ದಾನೆ.



ಬೆಳ್ಮಣ್ಣು ಮುಂಡ್ಕೂರಿನ ಶ್ರೀಮತಿ ದೀಪಾ ಹಾಗೂ ಶ್ರೀ ಸುಧಾಕರ್ ರಾವ್ ಬೆಳ್ಳೆ ಇವರ ಪುತ್ರಿ, ಬೆಳ್ಮಣ್ಣಿನ ಲಕ್ಷ್ಮೀಜನಾರ್ದನ ಹೈಸ್ಕೂಲಿನ ವಿದ್ಯಾರ್ಥಿನಿ **ಕು| ಸ್ವಾತಿ** ಸಿಬಿಎಸ್‌ಸಿ 10ನೇ ತರಗತಿಯ ಪರೀಕ್ಷೆಯಲ್ಲಿ 9.4 ಅಂಕಗಳೊಂದಿಗೆ ಉನ್ನತ ಶ್ರೇಣಿಯಲ್ಲಿ ಉತ್ತೀರ್ಣಳಾಗಿರುತ್ತಾಳೆ.



ಕುಂದಾಪುರ ಅರೆಹೊಳೆಯ ಶ್ರೀಮತಿ ಸುಧಾ ಮಾಲಿನಿ ಹಾಗೂ ನಾಗೇಶ್ ಶ್ಯಾನುಭಾಗ್ ಇವರ ಪುತ್ರಿ **ಕು| ಹರ್ಷಿತಾ ಶ್ಯಾನುಭಾಗ್** ಇವರು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 568 ಅಂಕಗಳಿಸಿ ಉತ್ತೀರ್ಣಳಾಗಿರುತ್ತಾಳೆ.



2015-16ನೇ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ (ಸಿ ಬಿ ಎಸ್ ಸಿ) ಬೆಂಗಳೂರಿನ ಹೆಬ್ಬಾಳದ ಸಿಂಧಿ ಪಿ.ಯು. ಕಾಲೇಜಿನ **ಪ್ರಹರ್ಷಿತ ರಾವ್** 93.6% ಅಂಕ ಗಳಿಸಿ ವಿಶಿಷ್ಟ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ. ಈಕೆ ಬೆಂಗಳೂರಿನಲ್ಲಿ ಚಾರ್ಟೆಡ್ ಅಕೌಂಟೆಂಟ್ ಆಗಿರುವ ಕಾಪು ಕರಂದಾಡಿ ಶ್ರೀ ಅನಂತಕೃಷ್ಣ ರಾವ್ ಹಾಗು ಶ್ರೀಮತಿ ಪದ್ಮಾವತಿ ದಂಪತಿಗಳ ಪುತ್ರಿ.



ಕುಂದಾಪುರ ಅಮಾಸೆಬೈಲಿನ ಕೆ. ಸುಜೇಂದ್ರ ರಾವ್ ಮತ್ತು ಮೀನಾಕ್ಷಿ ದಂಪತಿಗಳ ಪುತ್ರಿ **ಕು| ಸಂಜನಾ ರಾವ್** ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 608 ಅಂಕಗಳಿಸಿ ಉತ್ತೀರ್ಣಳಾಗಿರುತ್ತಾಳೆ.

## ನಾಮಕರಣ

ಬೆಂಗಳೂರಿನ ನಿವಾಸಿ ಶ್ರೀಮತಿ ರಶ್ಮಿ ಹಾಗೂ ಶ್ರೀ ಶಶಿಕಾಂತ ದಂಪತಿಗಳು ತಮ್ಮ ಮಗಳು **ಶ್ರೀಮಯಿಯ** ನಾಮಕರಣ ಸಮಾರಂಭವನ್ನು ತಾ. 26-05-2016ರಂದು ಪಡುಬಿದ್ರಿ ಶ್ರೀ ಉದಯಾದ್ರಿ ಬಾಲಗಣಪತಿ ಪ್ರಸನ್ನಪಾರ್ವತೀ ದೇವಾಲಯದಲ್ಲಿ ನೆರವೇರಿಸಿದರು. ಶ್ರೀಮತಿ ರಶ್ಮಿ ಇವರು ಮಜೂರಿನ ಶ್ರೀ ಹೆಚ್.ಎಂ ರಾಯರ ಪುತ್ರಿ.

## ಶುಭ ವಿವಾಹ

ಬೆಂಗಳೂರಿನ ಶ್ರೀಮತಿ ಸರಳಾ ನಾಗೇಂದ್ರ ಹಾಗೂ ಡಾ| ಸಿ.ಎ. ನಾಗೇಂದ್ರ ಇವರ ಪುತ್ರ **ಡಾ| ವಿನಯ್** ಹಾಗು ಮುಂಬಯಿಯ ಡಾ| ರೂಪಾ ರಾಜೇಶ್ ರಾವ್ ಹಾಗೂ ಡಾ| ರಾಜೇಶ್ ರಾಮಚಂದ್ರರಾಯರ ಪುತ್ರಿ **ಶ್ರುತಿ** ಇವರ ವಿವಾಹವು ತಾ 16-06-2016ನೇ ಗುರುವಾರ ಉಡುಪಿ ಅಂಬಲಪಾಡಿಯ ಶ್ಯಾಮಿಲಿ ಹಾಲ್ ನಲ್ಲಿ ನೆರವೇರಿತು.

## ನಿಧನ

ಬೆಂಗಳೂರಿನಲ್ಲಿ ವಾಸವಾಗಿದ್ದ ಶ್ರೀ ಇನ್ನ ರಾಮ ರಾವ್‌ರ ಪತ್ನಿ ಶ್ರೀಮತಿ ವಾಗ್ದೇವಿ ಇವರು ತಾ.19-06-2016ರಂದು ನಿಧನ ಹೊಂದಿದರು ಅವರಿಗೆ 93 ವರ್ಷ ಪ್ರಾಯವಾಗಿತ್ತು.

**** ****

ಚೆಂಡುಕಳ ಶಂಕರನಾರಾಯಣ ರಾವ್ ಇವರ ಪತ್ನಿ, ಕಾರ್ಕಳದ ನಿವೃತ್ತ ಶಿಕ್ಷಕಿ ಶ್ರೀಮತಿ ಚೆಂಡುಕಳ ಮಹಾಲಕ್ಷ್ಮೀ ಇವರು ತಾ.27-6-2016ರಂದು ನಿಧನ ಹೊಂದಿದರು. ಇವರ ಸ್ಮರಣಾರ್ಥವಾಗಿ ಅವರ ಅಪೇಕ್ಷೆಯಂತೆ ಅವರ ಮಕ್ಕಳಾದ ಶ್ರೀ ಬಾಲಕೃಷ್ಣ ರಾವ್ ಹಾಗೂ ಗಣೇಶ್ ರಾವ್‌ರವರು ಶ್ರೀಶಾರದಾ ದೇವಸ್ಥಾನಕ್ಕೆ ರೂ.5,000/-ಗಳನ್ನು ಕಾಣಿಕೆಯಾಗಿ ನೀಡಿರುವರು. ಶ್ರೀಮತಿ ಮಹಾಲಕ್ಷ್ಮೀರವರ ಆತ್ಮಕ್ಕೆ ಶ್ರೀದೇವಿಯು ಚಿರಶಾಂತಿಯನ್ನು ನೀಡಲಿ ಹಾಗೂ ಕುಟುಂಬದವರಿಗೆ ಅಗಲಿಕೆಯ ದು:ಖವನ್ನು ಭರಿಸುವ ಶಕ್ತಿಯನ್ನು ನೀಡಲಿ ಎಂದು ಆಡಳಿತ ಮಂಡಳಿ ಪ್ರಾರ್ಥಿಸುತ್ತದೆ.

## ಸೀಮಂತೋನ್ನಯನ

ಕೊಕ್ರಾಡಿ ವಸಂತ ರಾವ್ ಇವರ ಪುತ್ರ ಚಿ| ಸಂದೀಪನ ಧರ್ಮಪತ್ನಿ ಹಾಗೂ ಮಿತ್ತೂರು ಸುರೇಶ್ ರಾಯರ ಸುಪುತ್ರಿ ನಿಶ್ಚಿತಾಳಿಗೆ ತಾ.26-05-2016ನೇ ಗುರುವಾರ ಕೊಕ್ರಾಡಿ ಶಾಲಿಪುರ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದ ಸಭಾಭವನದಲ್ಲಿ ಸೀಮಂತೋನ್ನಯನ ಜರಗಿತು.

**** ****

ಕೇದಗೆ ಶಿವರಾವ್ ಮತ್ತು ಶ್ರೀಮತಿ ಸಂಧ್ಯಾರವರ ಸುಪುತ್ರ ಚಿ| ಸುಭಾಷ್‌ಚ್ಚಂದ್ರರ ಧರ್ಮಪತ್ನಿ ಚಿ| ಸೌ| ಅಮೃತಾಳಿಗೆ (ಬೇರಿಕೆ ಕೃಷ್ಣಯ್ಯ ಮತ್ತು ಶ್ರೀಮತಿ ಗೀತಾರವರ ಸುಪುತ್ರಿ) ತಾ.27-06-2016ರಂದು ವಗ್ಗ ಕಾರಿಂಜ ಕ್ರಾಸ್ ಬಳಿ ಇರುವ "ಪಚ್ಚಾಜೆ ಸಭಾಂಗಣ"ದಲ್ಲಿ ಸೀಮಂತೋನ್ನಯನ ಜರಗಿತು.

## ಶುಭ ಜನನ

ಅಂಬಲಪಾಡಿ ಎಚ್.ಎನ್.ಶ್ಯಾನುಭಾಗ್ ಮತ್ತು ಶ್ರೀಮತಿ ಮಹಾಲಕ್ಷ್ಮೀ ಇವರ ಪುತ್ರ ಬೆಂಗಳೂರಿನ ಶ್ರೀ ಕಿರಣ್ ಶ್ಯಾನುಭಾಗ್ ಮತ್ತು ಶ್ರೀಮತಿ ಅನ್ನಪೂರ್ಣ ದಂಪತಿಗಳಿಗೆ ಜೂನ್ 21, 2016ರಂದು ಹೆಣ್ಣು ಮಗುವಿನ ಜನನವಾಗಿರುತ್ತದೆ.

## ಕರ್ಕಾಟಕ ಮಾಸದ ವಿಶೇಷ ದಿನಗಳು

| | | | |
|---|---|---|---|
| 16-07-2016 | ಕರ್ಕಾಟಕ ಸಂಕ್ರಮಣ | 02-08-2016 | ಅಮಾವಾಸ್ಯೆ |
| | ದಕ್ಷಿಣಾಯನ ಪುಣ್ಯಕಾಲ | 07-08-2016 | ನಾಗರ ಪಂಚಮಿ |
| 19-07-2016 | ಗುರುಪೂರ್ಣಿಮಾ | 12-08-2016 | ವರಮಹಾಲಕ್ಷ್ಮೀ ವ್ರತ |
| | ಚಾತುರ್ಮಾಸ್ಯ ಆರಂಭ | 14-08-2016 | ಸರ್ವೈಕಾದಶಿ |
| 23-07-2016 | ಸಂಕಷ್ಟಹರ ಚತುರ್ಥಿ | 16-08-2016 | ಸಿಂಹ ಸಂಕ್ರಮಣ |
| 30-07-2016 | ಸರ್ವೈಕಾದಶಿ | 17-08-2016 | ಋಗುಪಾಕರ್ಮ |





ಶುಭಾಶಯಗಳೊಂದಿಗೆ
ಶ್ರೀಮತಿ ಮತ್ತು ಶ್ರೀ ಉದಯಚಂದ್ರ ರಾವ್ ನಂದಳಿಕೆ

**ಯೆಶಸ್ವೀ ಎಂಟರ್‌ಪ್ರೈಸೆಸ್**

ಶಾಂಭವಿ ಹೈಟ್ಸ್, ಸೈಂಟ್‌ಮೇರಿಸ್ ಕಾಲೇಜು ಎದುರು, ಮುಖ್ಯರಸ್ತೆ, ಶಿರ್ವ - 574 116.
ಇ-ಮೇಲ್ : udayarao42@gmail.com

Z Gift Item Z Stationary Z Xerox Z Lamination
Z Spiral Binding Z Mobile & DTC Recharge Z Tours & Travels
Z Courier Service Z Sports Items & Toys Z Ice Creams

**ಶ್ರೀ ಮಾತಾ ಜ್ಯೋತಿಷ್ಯಾಲಯ**

ಶ್ರೀ ಸುಬ್ರಹ್ಮಣ್ಯ ಕ್ಷೇತ್ರ, ಚೌಳಕೆರೆ, ಬಾರ್ಕೂರು.

ಬಾರ್ಕೂರು ಸಂಸ್ಥಾನದ ಪಾರಂಪರ್ಯ ನಾಗಬ್ರಹ್ಮ ಹಾಗೂ ದುರ್ಗೆಯ ದರ್ಶನ ಪಾತ್ರಿಗಳು, ಜೋತಿಷ್ಯರು ಮತ್ತು ಪುರೋಹಿತರು ಅಷ್ಟ ಮಂಗಲ ಪ್ರಶ್ನೆ, ಆರೂಢರಾಶಿ ಪ್ರಶ್ನೆ, ಜಾತಕ, ನಾಗದರ್ಶನ ಮತ್ತು ಸರ್ಪಸಂಸ್ಕಾರ, ಆಶ್ಲೇಷಬಲಿ, ಪ್ರತಿಷ್ಠೆ, ಶಾಂತಿ ಹಾಗೂ ಶುಭ ಕರ್ಮಗಳಿಗೆ ಅಗತ್ಯವಿದ್ದಲ್ಲಿ ವಿಚಾರಿಸಿ.

ಶ್ರೀ ರಾಘವೇಂದ್ರ ಭಟ್ (ಫೋನ್ : 9632302234.)

ಶುಭಾಶಯಗಳೊಂದಿಗೆ

**ಹೆಬ್ಬಾರ್ ಎಂಟರ್‌ಪ್ರೈಸಸ್**

ವೈಷ್ಣವಿ ಬಿಲ್ಡಿಂಗ್, ವಾದಿರಾಜ ರಸ್ತೆ, ಉಡುಪಿ-576101.

ನಮ್ಮಲ್ಲಿ ಶುಭ ಸಮಾರಂಭಗಳಿಗೆ ಬೇಕಾಗುವ ಶಾಮಿಯಾನ, ಕುರ್ಚಿ, ಟೇಬಲ್, ಪಾತ್ರೆ, ಅಡುಗೆ ಹಾಗೂ ಕ್ಯಾಟರಿಂಗ್ ವ್ಯವಸ್ಥೆ ಲಭ್ಯವಿದೆ.

ಪ್ರೊ : ಮಂಜುನಾಥ ಹೆಬ್ಬಾರ್ ಸಂಪರ್ಕ ಸಂಖ್ಯೆ 9611099894

# ಸುಳಾದಿ ವೃಂದಾಗಾನೋತ್ಸವ ವೈಭವ

ನಮ್ಮ ಶಾರದಾ ಮಂಟಪದ ಅಧ್ಯಕ್ಷ ಶ್ರೀ ವೈ.ಭುವನೇಂದ್ರ ರಾಯರ ಪ್ರೋತ್ಸಾಹ ಹಾಗೂ ಮಹಿಳಾ ವಿಭಾಗದ ಅಧ್ಯಕ್ಷೆ ಶ್ರೀಮತಿ ಜಯಲಕ್ಷ್ಮೀ ಎಮ್.ರಾವ್‌ರವರ ಪ್ರಯತ್ನದಿಂದ ಶ್ರೀ ಶಾರದಾ ದೇವಸ್ಥಾನದಲ್ಲಿ ತಾ.07-06-2016ರಂದು ಸಂಜೆ ಅಪೂರ್ವ ಸುಳಾದಿ ವೃಂದಗಾನೋತ್ಸವವು ಶ್ರೀ ಶ್ರೀ ಬನ್ನಂಜೆ ರಾಘವೇಂದ್ರತೀರ್ಥ ಶ್ರೀಪಾದರ ನೇತೃತ್ವದಲ್ಲಿ ಸಮಾಜ ಬಾಂಧವರು ಹಾಗೂ ನೆರೆಕರೆಯ ಮಹಿಳಾ ಭಕ್ತೆಯರಿಂದ, ಸುಶ್ರಾವ್ಯವಾಗಿ ನಡೆಯಿತು. ಒಂದು ಹಾಡನ್ನು ಒಂದೇ ರಾಗದಿಂದ, ಐದು ಅಥವಾ ಏಳು ಬೇರೆ ಬೇರೆ ತಾಳಗಳಲ್ಲಿ ಹಾಡುವ ಸಂಗೀತ ಪ್ರಭೇದವೇ 'ಸುಳಾದಿ' ಎಂದು ಪ್ರಾರಂಭಿಕವಾಗಿ ಮಾಹಿತಿಕೊಟ್ಟ ಶ್ರೀಪಾದರು, 'ಹಾಡಿದವರ ಸುತ್ತಲೂ ಭಗವಂತ ಸುಳಿದಾಡುತ್ತಾನೆ. ತನ್ನ ಸುಳುವನ್ನು ತೋರಿಸುತ್ತಾನೆ, ಭಗವಂತನನ್ನು ತಿಳಿಯಲು ಸುಲಭದ ಹಾದಿ 'ಸುಳಾದಿ' ಹಾಗೂ ಇದರಿಂದ ಸಕಲ ಸೌಭಾಗ್ಯ, ಸುಖ-ಶಾಂತಿ, ನೆಮ್ಮದಿ ಸಿಗುತ್ತದೆ' ಎಂದು ತಿಳಿಸುತ್ತಾ ಮರುತ ನಿನ್ನಯ ಮಹಿಮೆ, ದುರ್ಗಾಸ್ತೋತ್ರ ಮತ್ತು ಶ್ರೀ ನರಸಿಂಹ ದೇವರ ಸ್ತೋತ್ರಗಳನ್ನು 'ಸುಳಾದಿ'ಗಳ ಮೂಲಕ ಹೇಳಿ ಕೊಡುತ್ತಾ, ನೆರೆದವರನ್ನೆಲ್ಲಾ ಹಾಡಿಸಿದರು, ಮಂಗಳ ಹಾಡುತ್ತಾ ತಾವು ಸ್ಥಾಪಿಸಿ, ಪೂಜಿಸುತ್ತಿರುವ 23 ಅಡಿ ಎತ್ತರದ ಬನ್ನಂಜೆ ಶ್ರೀ ಶನೈಶ್ಚರ ದೇವಸ್ಥಾನ ಸಂದರ್ಶಿಸಲು ಆಹ್ವಾನವಿತ್ತರು.

ಶ್ರೀ ಶಾರದಾಂಬೆಯ ಮಹಾಪೂಜೆಯ ನಂತರ, ಕಾರ್ಯಕ್ರಮದ ಅಂತ್ಯದಲ್ಲಿ ಶಾರದಾ ಮಂಟಪದ ಉಪಾಧ್ಯಕ್ಷರಾದ ಶ್ರೀ ಎಸ್.ಎಮ್ ರಾಯರು ಬನ್ನಂಜೆ ಶ್ರೀಪಾದರನ್ನು ಸನ್ಮಾನಿಸಿದರು ಶಾರದಾವೇದಿಕೆಯ ಮಹಾಪೋಷಕ ಶ್ರೀ ಗೋಪಾಲಕೃಷ್ಣ ಕೋಲ್ಪೆಯವರಿಂದ ಸ್ವಾಗತ ಹಾಗೂ ವಂದನಾರ್ಪನೆ ನಡೆಯಿತು.

ಈ ಕಾರ್ಯಕ್ರಮವು ಶಾರದಾ ಮಂಟಪದ ಮಹಿಳಾ ವಿಭಾಗದಿಂದ ಪ್ರಾಯೋಜಿಸಲ್ಪಟ್ಟಿತು.

**ವರದಿ: ಜಿ.ಕೆ.ಕೋಲ್ಪೆ**

# ವೈವಾಹಿಕ ಜೀವನದ ಬೆಳ್ಳಿಹಬ್ಬ ಆಚರಣೆ



ಉಡುಪಿ ಸಂತೆಕಟ್ಟೆ ಶ್ರೀನಗರ ವಾಸಿ, ಶ್ರೀ ಸಕ್ಕಟ್ಟು ಜಯರಾಮ ರಾಯರು (ಪ್ರಸಿದ್ಧ ಬಣ್ಣದ ವೇಷಧಾರಿ ದಿ. ಸಕ್ಕಟ್ಟು ಲಕ್ಷ್ಮೀ ನಾರಾಯಣ ರಾಯರ ಸುಪುತ್ರ) ಪತ್ನಿ ಸೌ. ಶಾಂಭವಿ (ದಿ. ಕಬ್ಬಿನಾಲೆ ಕೃಷ್ಣಯ್ಯ ಹೆಬ್ಬಾರರ ಸುಪುತ್ರಿ) ಯವರೊಂದಿಗೆ ತಮ್ಮ ವೈವಾಹಿಕ ಜೀವನದ 25ನೇ ವರ್ಷವನ್ನು ಮಕ್ಕಳು-ಬಂಧು-ಬಾಂಧವರೊಡಗೂಡಿ ತಾ.10-06-2016ರಂದು ಸಂಭ್ರಮದಿಂದ ಆಚರಿಸಿದರು. ಆ ಪ್ರಯುಕ್ತ ಕೆಳಾರ್ಕಳಬೆಟ್ಟು ಶ್ರೀ ದೇವಿ-ಭೂದೇವಿ ಸಹಿತ ವಿಷ್ಣುಮೂರ್ತಿ ದೇವಸ್ಥಾನದಲ್ಲಿ 'ಚಂಡಿಕಾಯಾಗ'ವನ್ನು ಹಿರಿಯರ ಉಪಸ್ಥಿತಿಯಲ್ಲಿ ಶಾಸ್ತ್ರೋಕ್ತವಾಗಿ ನೆರವೇರಿಸಿದರು. ಈ ಸುಸಂದರ್ಭದಲ್ಲಿ, ಮಗಳು ಸೌ.ಶರಣ್ಯಾ-ಅಳಿಯ ಚಿ. ಅವಿನಾಶರ ಮಗುವಿಗೆ ಚಿ. ಅಗಸ್ತ್ಯ ಎಂದು ನಾಮಕರಣ ಮಾಡಿಸಿ ವೈದಿಕರಿಂದ ಮಂತ್ರಾಕ್ಷತೆ ಪಡೆದರು. ಅತಿಥಿ -ಅಭ್ಯಾಗತರಿಗೆ ಪುಷ್ಕಳ ಭೋಜನದ ವ್ಯವಸ್ಥೆ ಮಾಡಲಾಗಿತ್ತು.

**ವರದಿ: ಜಿ.ಕೆ.ಕೋಲ್ಪೆ**

# ಹುಟ್ಟುಹಬ್ಬದ ಪ್ರಯುಕ್ತ ರುದ್ರಾಭಿಷೇಕ

ಸಮ್ಮ ಸಂಘದ ಸಲಹೆಗಾರರಾದ ಶ್ರೀ ಬೆಳ್ಮಣ್ ವಾಸುದೇವರಾಯರು ತಮಗೆ ಎಂಬತ್ತೈದು ವರ್ಷಗಳು ತುಂಬಿದ ಪ್ರಯುಕ್ತ ತಮ್ಮ ಪತ್ನಿ ಹಾಗೂ ಬಂಧುಬಾಂಧವರೊಡಗೂಡಿ ತಾ23-06-2016 ರಂದು ಕುಂಜಿಬೆಟ್ಟಿನ ಶ್ರೀ ಶಾರದಾ ದೇವಿಯ ಸನ್ನಿಧಿಯಲ್ಲಿ ಗುರು, ಗಣೇಶ, ಸುಬ್ರಹ್ಮಣ್ಯಾದಿ ದೇವರುಗಳಿಗೆ ಪೂಜೆ ಹಾಗು ರುದ್ರ ದೇವರಿಗೆ ಏಕಾದಶ ರುದ್ರಾಭಿಷೇಕ ಹಾಗೂ ಶ್ರೀ ಶಾರದಾದೇವಿಗೆ ಪುಷ್ಪಾಲಂಕಾರ ಸೇವೆಯನ್ನು ನೆರವೇರಿಸಿದರು.

## ಶ್ರೀಶಾರದಾ ವೇದಿಕೆ - ಪ್ರಕಟಣೆ

**ಪತ್ರಿಕೆಯ ವಿಳಾಸ : ಸಂಪಾದಕರು, ಶ್ರೀ ಶಾರದ ಪತ್ರಿಕೆ, ಶಾರದಾ ಮಂಟಪ, ಶಾರದಾ ನಗರ, ಕುಂಜಿಬೆಟ್ಟು, ಉಡುಪಿ-576 102.**
**ಇ-ಮೇಯ್ಲ್ : srisharadaudupi@gmail.com**
**ವೈಬ್‌ಸೆಟ್ : www.srisharada.org ವಾಟ್ಸ್ ಆ್ಯಪ್ ನಂಬ್ರ : 9845136322**
**ಶಾರದ ಮಂಟಪದ ಮ್ಯಾನೇಜರ್ : 0820-2520754, 9448108920**

### ಶ್ರೀಶಾರದಾ ವೇದಿಕೆಗೆ ಸದಸ್ಯತನ ಶುಲ್ಕ

ಆಜೀವ ಸದಸ್ಯರು : ರೂ.500/-, ದಾನಿಗಳು : ರೂ.1000/-,
ಪೋಷಕರು : ರೂ.5000/-, ಮಹಾಪೋಷಕರು : ರೂ.10000/-

### ಜಾಹೀರಾತುದರ

| | | |
|---|---|---|
| ಕಲರ್ ಪುಟದ 1/3ನೇ ಭಾಗ 12 ತಿಂಗಳುಗಳಿಗೆ | : | ರೂ.12000/- |
| ಕಲರ್ ಪುಟದ 1/8ನೇ ಭಾಗ ಶುಭಾಶಯ ಇತ್ಯಾದಿ ಜಾಹೀರಾತು ಒಂದುಬಾರಿಗೆ | : | ರೂ.1000/- |
| ಕಪ್ಪು ಬಿಳುಪು ಪುಟದ 1/8ನೇ ಭಾಗ ಶುಭಾಶಯ ಇತ್ಯಾದಿ ಜಾಹೀರಾತು ಒಂದು ಬಾರಿಗೆ | : | ರೂ.500/- |
| ಕಪ್ಪು ಬಿಳುಪು ಪುಟದ 2 ಇಂಚು 2 ಕಾಲಂ 12 ತಿಂಗಳುಗಳಿಗೆ | : | ರೂ.1500/- |

ಈ ಶುಲ್ಕವನ್ನು ತಮ್ಮ ಹೆಸರು ವಿಳಾಸದೊಂದಿಗೆ, ನಗದು, ಚೆಕ್ ಅಥವಾ ಡಿ.ಡಿ. ಮುಖಾಂತರ ಸಲ್ಲಿಸಬಹುದು ಅಥವಾ ಸಿಂಡಿಕೇಟ್ ಬ್ಯಾಂಕ್, ಕಾರ್‌ಸ್ಟ್ರೀಟ್ ಬ್ರಾಂಚ್, ಬ್ಯಾಂಕಿನ ಖಾತೆಗೆ ನೇರವಾಗಿ ಜಮಾ ಮಾಡಿ ಅದರ ರಶೀದಿಯನ್ನು ಮೇಲಿನ ನಮ್ಮ ಇ-ಮೇಯ್ಲ್/ವಾಟ್ಸ್‌ಆ್ಯಪ್ ವಿಳಾಸಕ್ಕೆ ಕಳುಹಿಸಬಹುದು. ಖಾತೆಯ ಹೆಸರು ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ, ಕುಂಜಿಬೆಟ್ಟು, ಉಡುಪಿ, ಖಾತೆಸಂಖ್ಯೆ : 80325001028816O1 at Karnataka Bank, Kunjibettu Branch, Udupi IFSC Code KARB0000803

**ಸಮಾಜ ಬಾಂಧವರು ಪತ್ರಿಕೆಯನ್ನು ತುಂಬು ಹೃದಯದಿಂದ ಪ್ರೋತ್ಸಾಹಿಸುವಂತೆ ವಿನಂತಿ**

## ಅಂತರಜಾಲದಲ್ಲಿ ಸ್ಥಾನಿಕ ಬ್ರಾಹ್ಮಣ ವಧೂವರರ ಮಾಹಿತಿ

**ಅಖಿಲ ಭಾರತ ಸ್ಥಾನಿಕ ಬ್ರಾಹ್ಮಣ ಸಭಾ (ರಿ) ಬೆಂಗಳೂರಿನ ವಿವಾಹ ಸಮಿತಿಯ** ಅಂತರ್ಜಾಲದಲ್ಲಿ ಸ್ಥಾನಿಕ ಬ್ರಾಹ್ಮಣ ವಧೂವರರ ವಿವರಗಳನ್ನು ಸ್ವತಃ ಪ್ರಕಟಿಸಬಹುದಲ್ಲದೆ, ಬೇರೆಯವರು ಪ್ರಕಟಿಸಿದ ವಿವರಗಳನ್ನು ವೀಕ್ಷಿಸಬಹುದಾಗಿದೆ. ಆಸಕ್ತರು ಮೊದಲಿಗೆ www.sthanika.info ಜಾಲತಾಣವನ್ನು ಓಪನ್ ಮಾಡಿ ಅದರಲ್ಲಿ members only-matrimonialನ್ನು ಆಯ್ಕೆ ಮಾಡಿ, ಮೊದಲಿಗೆ 'Register' ಆಯ್ಕೆಮಾಡಿ. ನಂತರ, ಈ-ಮೇಲ್ ಮೂಲಕ ಸದಸ್ಯರನ್ನಾಗಿ ಮಾಡಿ, ಆನಂತರ ವಧೂವರರ ವಿವರ (ಪೋಟೋ, ಜಾತಕ ಸ್ಕ್ಯಾನ್ ಮಾಡುವ ಮೂಲಕ) ಜಾಲತಾಣಕ್ಕೆ ಹಾಕಬಹುದು, ವಧೂವರರ ವಿವರಗಳನ್ನು ನೋಡಬಹುದು.

**ಹೆಚ್ಚಿನ ಮಾಹಿತಿಗಾಗಿ 'marriage@sthanika.info' ಮೂಲಕ ಸಂಪರ್ಕಿಸಬಹುದು/ ಫೋನ್ ಮೂಲಕ ಸಂಪರ್ಕಿಸಿ ವಿವರಗಳನ್ನು ತಿಳಿದುಕೊಳ್ಳಬಹುದು.**
**(ಗುರುಪ್ರಸಾದ್ ರಾವ್-9448912069; ಸುಬ್ರಮಣ್ಯ ಸಿ.ಆರ್.-9740022733; ರಮಾನಾಥ್ ರಾವ್-9448933425.**


## ಶ್ರೀ ವೈಷ್ಣವಿ ಜ್ಯೋತಿಷ್ಯಾಲಯ

ನಮ್ಮಲ್ಲಿ ಜಾತಕಗಳನ್ನು ಮಾಡಿ ಕೊಡಲಾಗುವುದು.
ಹಾಗೂ ತತ್ಸಂಬಂಧ ಶಾಂತಿ ಹೋಮಾದಿಗಳನ್ನು ಮತ್ತು ಶುಭ ಕಾರ್ಯಕ್ರಮಗಳನ್ನು
ನಮ್ಮಲ್ಲಿಯೇ ವ್ಯವಸ್ಥಿತವಾಗಿ ಮಾಡಿಕೊಡಲಾಗುವುದು.

**ವೇದಮೂರ್ತಿ ಚಿದಾನಂದ ಭಟ್**


| | |
|---|---|
| #1437, 5ನೇ ಮುಖ್ಯ ರಸ್ತೆ, 2ನೇ "ಡಿ" ಬ್ಲಾಕ್, 2ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು-560010 | ಶ್ರೀ ಅಗಸ್ತ್ಯೇಶ್ವರ ದೇವಸ್ಥಾವದ ಬಳಿ, ಕಿರಿಮಂಜೇಶ್ವರ, ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ |

**ಮೊಬೈಲ್- 9886629697, 9986119865**

SAMPATH KUMAR
Mobile : 9741508881
8884873233

**TRISHULINI TOURIST**
*The Tourist People*
Near Mahishamardhini Temple, Bailur, Udupi.
ALL TYPES OF VEHICLES AVAILABLE FOR HIRE







## ಮಾರ್ಪಳ್ಳಿ ಆರ್.ಮಂಜುನಾಥರಿಗೆ ಸನ್ಮಾನ



ತಾ.13-06-2016ರಂದು ಬೆಂಗಳೂರಿನ ಬನಶಂಕರಿಯಲ್ಲಿ ಎಕ್ಸೆಲ್ ಚಾರಿಟೇಬಲ್ ಟ್ರಸ್ಟ್ ವತಿಯಿಂದ ವಿದ್ಯಾರ್ಥಿಗಳಿಗೆ ಬೆಂಬಲಿಸುವ ಕಾರ್ಯಕ್ರಮ ಏರ್ಪಡಿಸಲಾಗಿದ್ದು, ಈ ಕಾರ್ಯಕ್ರಮದಲ್ಲಿ ಕನ್ನಡ ಭಾಷೆಯ ನುಡಿ, ಸಂಸ್ಕೃತಿ, ಸಾಹಿತ್ಯ ಕ್ಷೇತ್ರಗಳಲ್ಲಿ ಶ್ಲಾಘನೀಯ ಸೇವೆ ಸಲ್ಲಿಸಿದ ಶ್ರೀ ಮಾರ್ಪಳ್ಳಿ ಆರ್.ಮಂಜುನಾಥ ಹಾಗೂ ಶ್ರೀ ಡಾ. ಎನ್. ಎಸ್ ಲಕ್ಷ್ಮೀನಾರಾಯಣ ಭಟ್ ಇವರನ್ನು ಸನ್ಮಾನಿಸಿ ಅಭಿನಂದನಾ ಪತ್ರವನ್ನು ಸಲ್ಲಿಸಲಾಯಿತು

## ಕುಮಾರಿ ದಿಶಾ ರಾವ್‌ಗೆ ಸನ್ಮಾನ



ತಾ.29-05-2016 ರಂದು ಶ್ರೀ ಶಾರದಾ ಮಂಟಪ ಕುಂಜಿಬೆಟ್ಟಿನಲ್ಲಿ ಶ್ರೀಮತಿ ಲತಾ ಹಾಗೂ ಶ್ರೀ ಪ್ರಕಾಶ್ ರಾವ್‌ರವರ ವೈವಾಹಿಕ ಬೆಳ್ಳಿಹಬ್ಬದ ಪ್ರಯುಕ್ತ ಅವರ ಪುತ್ರಿ ಕುಮಾರಿ ದಿಶಾರಾವ್‌ರವರಿಂದ ಒಂದೂವರೆ ಗಂಟೆಗಳ ಕಾಲ ಇಪ್ಪತ್ತೈದು ಜನ ಕಲಾವಿದರೊಂದಿಗೆ ಅಮೋಘವಾದ ವೀಣಾವಾದನ ಕಾರ್ಯಕ್ರಮವು ನೆರವೇರಿತು. ಶ್ರೀ ಪ್ರಕಾಶ್ ರಾವ್‌ರವರು ಉಡುಪಿಯ ಪ್ರಸಿದ್ಧ ಸಂಗೀತ ಕಲಾವಿದರಾಗಿದ್ದು ಅವರ ಪುತ್ರಿಯೂ ಸಂಗೀತ ಕ್ಷೇತ್ರದಲ್ಲಿ ಉತ್ತಮ ಸಾಧನೆ ಮಾಡಿರುತ್ತಾಳೆ. ಈ ಸಂದರ್ಭದಲ್ಲಿ ಸಂಗೀತ ಕ್ಷೇತ್ರದ ದಿಗ್ಗಜ ಶ್ರೀ ಪಂ. ವಾಸುದೇವ ಭಟ್ ಇವರು ಶ್ರೀ ಪ್ರಕಾಶ್ ರಾವ್, ಶ್ರೀಮತಿ ಲತಾ ಹಾಗೂ ಕುಮಾರಿ ದಿಶಾರವರನ್ನು ಶಾಲು ಹೊದಿಸಿ ಸನ್ಮಾನಿಸಿದರು.

## ಶಾಲಾಮಕ್ಕಳಿಗೆ ನೋಟ್ ಪುಸ್ತಕದ ವಿತರಣೆ



ಮಂಗಳೂರು ಕೂಳೂರಿನ ಪ್ರಥ್ವಿ ಲೇಔಟ್‌ನ ಶ್ರೀಮತಿ ಪುಷ್ಪಾವತಿ ಶ್ರೀನಿವಾಸ ರಾವ್ ಇವರು ತಾವು ಶಿಕ್ಷಕಿಯಾಗಿ ಸೇವೆ ಸಲ್ಲಿಸುತ್ತಿದ್ದ ಚಿತ್ರಾಪುರದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಗೆ 23,000 ರೂ ಮೌಲ್ಯದ ನೋಟ್ ಪುಸ್ತಕಗಳನ್ನು ಕೊಡುಗೆಯಾಗಿತ್ತರು. ಈ ನೋಟ್ ಪುಸ್ತಕದ ವಿತರಣಾ ಸಮಾರಂಭವು ಶಾಲಾ ಪ್ರಾರಂಭೋತ್ಸವದಂದು ನೆರವೇರಿತು. ಈ ಸಂದರ್ಭದಲ್ಲಿ ಶ್ರೀಮತಿ ಪುಷ್ಪಾವತಿ ಹಾಗೂ ಶ್ರೀ ಶ್ರೀನಿವಾಸ ರಾವ್ ದಂಪತಿಗಳನ್ನು ಶಾಲಾ ಮುಖ್ಯಸ್ಥರು ಹಾಗೂ ಊರ ಗಣ್ಯರು ಸನ್ಮಾನಿಸಿದರು.




## ಪುಣ್ಯಸ್ಮರಣೆ



ಸರಿದುವು ಎಂಟು ವರುಷಗಳು ನಿಮ್ಮ ಬದುಕಿನಾ ನೆನಪಿನಲಿ
ಅರ್ಪಿಸುವೆವು ನುಡಿನಮನಗಳ ಶ್ರದ್ಧಾಭಕ್ತಿಯಲಿ

ಶ್ರೀಮತಿ ಇಂದಿರಾ (ಪತ್ನಿ)
ಡಾ। ವೈ. ಸುದರ್ಶನ ರಾವ್ ಮತ್ತು ಶ್ರೀಮತಿ ವಿದ್ಯಾ
ಶ್ರೀ ವೈ. ಚಿತ್ತರಂಜನ ರಾವ್ ಮತ್ತು ಶ್ರೀಮತಿ ಭಾನುಪ್ರಿಯ
ಶ್ರೀಮತಿ ನಿವೇದಿತಾ ಮತ್ತು ಡಾ. ಕೆ.ಎಸ್.ಮುರಲೀಧರ ರಾವ್ ಮತ್ತು ಮೊಮ್ಮಕ್ಕಳು

**ಡಾ। ಎಲ್ಲೂರು ಚಂದ್ರಶೇಖರ ರಾವ್**

ಜನನ : 08-08-1938 ಮರಣ : 17-07-2008

## ಶ್ರದ್ಧಾಂಜಲಿ




ಸದಾ ನಿಮ್ಮ ನೆನಪಿನಲ್ಲಿರುವ.......

ಶ್ರೀ ಚೆಂಡುಕಳ ಬಾಲಕೃಷ್ಣ ರಾವ್ ಹಾಗೂ ಶ್ರೀಮತಿ ಭಾಗ್ಯಲಕ್ಷ್ಮೀ
ಶ್ರೀ ಚೆಂಡುಕಳ ಗಣೇಶ್ ರಾವ್ ಹಾಗೂ ಶ್ರೀಮತಿ ಉಷಾ
ಶ್ರೀಮತಿ ವೇದಾಂಬಾ ಶ್ಯಾನುಭಾಗ್
ಮೊಮ್ಮಕ್ಕಳು ಹಾಗೂ ಬಂಧುಮಿತ್ರರು

**ಶ್ರೀಮತಿ ಚೆಂಡುಕಳ ಮಹಾಲಕ್ಷ್ಮೀ**

ಜನನ : 30-09-1926 ಮರಣ : 27-06-2016

## 85ನೇ ವರ್ಷದ ಹುಟ್ಟುಹಬ್ಬದ ಶುಭಾಶಯಗಳು



**ಶ್ರೀ ಬೆಳ್ಮಣ್ಣು ವಾಸುದೇವ ರಾವ್ ಹಾಗೂ ಶ್ರೀಮತಿ ನಾಗವೇಣಿ**

ಶುಭ ಕೋರುವ :

ಶ್ರೀಮತಿ ಅನುರಾಧಾ ಹಾಗೂ ಶ್ರೀ ಸುರೇಶ್ ಶ್ಯಾನುಭೋಗ್
ಶ್ರೀಮತಿ ಗೀತಾ ಹಾಗೂ ಶ್ರೀ ಜಗದೀಶ ಶ್ಯಾನುಭೋಗ್
ಶ್ರೀಮತಿ ಜಾಹ್ನವಿ ಹಾಗೂ ಶ್ರೀ ರಮೇಶ್ ರಾವ್
ಶ್ರೀಮತಿ ಉಷಾ ಹಾಗೂ ಶ್ರೀ ಗಣೇಶ್ ರಾವ್
ಶ್ರೀಮತಿ ಜಯಲಕ್ಷ್ಮೀ ಹಾಗೂ ಶ್ರೀ ಅಣ್ಣಾಜಿ ರಾವ್
ಶ್ರೀಮತಿ ಮಮತ ಹಾಗೂ ಶ್ರೀ ಗುರುಪ್ರಸಾದ್

## ವಿದೇಶ ಪ್ರಯಾಣ



ಶ್ರೀ ಬಿ. ಜಯರಾಮ ರಾಯರು ಮತ್ತು ಶ್ರೀಮತಿ ವೀಣಾ

ಪಾದೆಬೆಟ್ಟು ಶ್ರೀ ವಿಷ್ಣುಮೂರ್ತಿ ದೇವಸ್ಥಾನದ ಮೊಕ್ತೇಸರ ಹಾಗೂ ಶ್ರೀ ಶಾರದಾ ಕ್ರೆಡಿಟ್ ಸೊಸೈಟಿ ಹಾಗೂ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು ಇದರ ನಿರ್ದೇಶಕರಾಗಿರುವ ಶ್ರೀ ಬಿ. ಜಯರಾಮ ರಾಯರು ತಮ್ಮ ಪತ್ನಿ ಶ್ರೀಮತಿ ವೀಣಾ ರೊಂದಿಗೆ ಐರ್ಲ್ಯಾಂಡಿನಲ್ಲಿ ಉದ್ಯೋಗದಲ್ಲಿರುವ ತಮ್ಮ ಪುತ್ರ ಶ್ರೀ ಸೌರಭರಾವ್‌ರಲ್ಲಿಗೆ ತಾ.05-07-2016 ರಂದು ತೆರಳಿದ್ದಾರೆ ಅವರು ಇಂಗ್ಲೆಂಡ್ ಹಾಗೂ ದುಬ್ಯಾ ದೇಶಗಳನ್ನು ಈ ಪ್ರವಾಸದಲ್ಲಿ ಸಂದರ್ಶಿಸಲಿದ್ದಾರೆ. ಅವರ ಪ್ರಯಾಣ ಸುಖಕರವಾಗಿರಲೆಂದು ಹಾರೈಸುವ,

**ಸಹೋದರ ಸಹೋದರಿಯರು ಹಾಗೂ ಬಂಧು ಮಿತ್ರರು**

# ಸ್ಥಾನಿಕ ಬ್ರಾಹ್ಮಣ ಸಭಾ ಪಡುಬಿದ್ರೆಯ ವಾರ್ಷಿಕ ಮಹಾಸಭೆ

ಪಡುಬಿದ್ರಿಯ ಶ್ರೀ ಸ್ಥಾನಿಕ ಬ್ರಾಹ್ಮಣ ಸಭಾದ ಮಹಾಸಭೆ ಹಾಗೂ ವಾರ್ಷಿಕೋತ್ಸವವು ತಾ.26-06-2016ನೇ ರವಿವಾರ ಶ್ರೀ ಬಾಲ ಗಣಪತೀ-ಪ್ರಸನ್ನಪಾರ್ವತೀ ದೇವಾಲಯದ ಪ್ರಾಂಗಣದಲ್ಲಿ ನೆರವೇರಿತು. ಉಪಹಾರದ ನಂತರ ಕ್ಷೇತ್ರದ ದೇವರಿಗೆ ಪ್ರಾರ್ಥನೆ ಸಲ್ಲಿಸಿದ ಬಳಿಕ ವೇದಿಕೆಯಲ್ಲಿ ದೀಪ ಬೆಳಗಿಸಿ ಕಾರ್ಯಕ್ರಮವನ್ನು ಉದ್ಘಾಟಿಸಲಾಯಿತು. ಸಂಘದ ಗೌರವಾಧ್ಯಕ್ಷರಾದ ಶ್ರೀ ಪಿ.ಬಿ.ವಾಸುದೇವ ರಾವ್, ಅಧ್ಯಕ್ಷರಾದ ಶ್ರೀ ಎಮ್.ಕೆ. ಮೋಹನ್ ರಾವ್ ಹಾಗೂ ಕೋಶಾಧಿಕಾರಿಗಳಾದ ಶ್ರೀ ಅರವಿಂದ ರಾವ್ ಇವರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಅತಿಥಿಗಳಾಗಿ ಬೆಳ್ತಂಗಡಿಯ ಪ್ರಸಿದ್ಧ ನ್ಯಾಯವಾದಿ ಶ್ರೀ ಬಿ.ಕೆ.ಧನಂಜಯಕುಮಾರ್ ಇವರು ಆಗಮಿಸಿದ್ದರು. ಮಹಿಳಾ ವೇದಿಕೆಯ ಸದಸ್ಯರ ಪ್ರಾರ್ಥನೆಯ ಬಳಿಕ ಶ್ರೀಯುತ ಅರುಣ್‌ರಾವ್ ಇವರು ಸಭಿಕರನ್ನು ಸ್ವಾಗತಿಸಿದರು. ಕಾರ್ಯದರ್ಶಿಗಳಾದ ಸುಧಾಕರ್ ಬೆಳ್ಳೆಯವರು ಗತವರ್ಷದ ವರದಿಯನ್ನು ಸಭೆಯ ಮುಂದೆ ಮಂಡಿಸಿ ಮಂಜೂರಾತಿ ಪಡೆದರು. ಕೋಶಾಧಿಕಾರಿಗಳಾದ ಶ್ರೀಯುತ ಅರವಿಂದ ರಾವ್‌ರವರು ಸಂಘದ ಆಯವ್ಯಯ ಪಟ್ಟಿಯನ್ನು ಮಂಡಿಸಿ, ಮಂಜೂರಾತಿ ಪಡೆದರು. ನಂತರ ಸಭೆಯಲ್ಲಿ ಅದಮಾರಿನ ನಿವೃತ್ತ ಶಿಕ್ಷಕ ಹಾಗೂ ಶ್ರೀ ಎಲ್ಲೂರು ಕಾಶೀಸಂತಾನ ಟ್ರಸ್ಟ್‌ನ ಸಂಚಾಲಕರಾದ ಶ್ರೀ ವೈ. ಎಂ.ಶ್ರೀಧರ ರಾಯರನ್ನು ಸನ್ಮಾನಿಸಲಾಯಿತು. ರಾಜ್ಯಪ್ರಶಸ್ತಿ ವಿಜೇತ ಶಿಕ್ಷಕ ಶ್ರೀ ವೆಂಕಟ ಕೃಷ್ಣ ರಾವ್ ಹಾಗೂ ಅಂತರಾಷ್ಟ್ರೀಯ ಕ್ರೀಡಾಪಟು



ಶ್ರೀ ವೈ. ಕುಮಾರ ಸ್ವಾಮಿ ಇವರನ್ನು ಅವರ ಸಾಧನೆಗಾಗಿ ಸಭೆಯಲ್ಲಿ ಗೌರವಿಸಲಾಯಿತು. ನಂತರ ನೂತನ ನಿರ್ದೇಶಕರ ಆಯ್ಕೆ ನಡೆಯಿತು. ಈ ಆಯ್ಕೆಯ ಪ್ರಕ್ರಿಯೆಯನ್ನು ಸುರತ್ಕಲ್ ಸ್ಥಾನಿಕ ಸಂಘದ ಅಧ್ಯಕ್ಷರಾದ ಶ್ರೀ ಕೆ. ಮಾಧವ ರಾವ್, ಕಾರ್ಕಳ ಶಂಕರ ಪ್ರತಿಷ್ಠಾನದ ಅಧ್ಯಕ್ಷರಾದ ಶ್ರೀ ಮುರಳೀಧರ ಶರ್ಮ, ಹಾಗೂ ಮೂಡಬಿದ್ರಿ ಸ್ಥಾನಿಕ ಬ್ರಾಹ್ಮಣ ಸಂಘದ ಅಧ್ಯಕ್ಷರಾದ ಬೊಕ್ಕಸ ಚಂದ್ರಶೇಖರ ರಾವ್ ಇವರು ನಡೆಸಿಕೊಟ್ಟರು.

2016-19ನೇ ಸಾಲಿನ ನೂತನ ಆಡಳಿತ ಮಂಡಳಿ ಹೀಗಿದೆ : ಗೌರವಾಧ್ಯಕ್ಷರು-ಶ್ರೀ ಪಿ.ಬಿ.ವಾಸುದೇವ ರಾವ್, ಅಧ್ಯಕ್ಷರು-ಶ್ರೀ ಎಮ್.ಕೆ.ಮೋಹನ ರಾವ್, ಉಪಾಧ್ಯಕ್ಷರು-ಶ್ರೀ ರಾಮರಾವ್ ಪಡುಬಿದ್ರಿ ಹಾಗೂ ಶ್ರೀ ವೈ.ಸುಬ್ಬರಾವ್ ಎಲ್ಲೂರು, ಕಾರ್ಯದರ್ಶಿ-ಶ್ರೀಮತಿ ರಮ್ಯಾ ಅರುಣ್‌ರಾವ್ ಮುಂಡ್ಕೂರು, ಜತೆ ಕಾರ್ಯದರ್ಶಿ- ಶ್ರೀ ಶ್ರೀನಿವಾಸ ಶರ್ಮ ಪಾದೆಬೆಟ್ಟು, ಕೋಶಾಧಿಕಾರಿ-ಶ್ರೀ ವಿಶ್ವೇಶರಾವ್ ಸಾಂತೂರು, ಜತೆ ಕೋಶಾಧಿಕಾರಿ-ಶ್ರೀ ಅರವಿಂದ ರಾವ್ ಪಡುಬಿದ್ರಿ, ನಿರ್ದೇಶಕರು-ಶ್ರೀಗಳಾದ ಎಂ.ಕೆ.ದಿವಾಕರ ರಾವ್ ಪಡುಬಿದ್ರಿ, ಕೃಷ್ಣರಾಜ ರಾವ್ ಮುದರಂಗಡಿ, ಗೋವಿಂದರಾವ್ ನಂದಿಕೂರು, ವಿದ್ಯಾರಣ್ಯರಾವ್ ಬಳ್ಕುಂಜೆ, ಲಕ್ಷ್ಮೀಕಾಂತ ರಾವ್ ಇನ್ನ, ಮಾಧವರಾವ್ ಎಲ್ಲೂರು, ನಯನಾಭಿರಾಮ ಸ್ವಾಮಿ ಪಡುಬಿದ್ರಿ, ಜನಾರ್ದನ ರಾವ್ ನಂದಿಕೂರು, ಉಲ್ಲಾಸ ರಾವ್ ಪಡುಬಿದ್ರಿ, ಶ್ರೀಕಾಂತರಾವ್ ಪಲಿಮಾರು, ಶಶಿಶೇಖರ ರಾವ್ ಪಡುಬಿದ್ರಿ, ಚಂದ್ರಶೇಖರ ರಾವ್ ಬೆಳ್ಮಣ್ಣು, ಶ್ರೀಮತಿ ರೇಖಾ ಯೋಗೀಶ ರಾವ್ ಮುಂಡ್ಕೂರು, ಶ್ರೀಮತಿ ದುರ್ಗಾ, ಶ್ರೀ ನಾಗೇಶ ರಾವ್ ಎರ್ಮಾಳು, ಶ್ರೀಮತಿ ಶುಭಾ ಜನಾರ್ದನ ರಾವ್ ನಂದಿಕೂರು, ಶ್ರೀಮತಿ ಸೀತಾದೇವಿ ಭಾಸ್ಕರರಾವ್ ಪಡುಬಿದ್ರಿ, ಶ್ರೀಮತಿ ವೇದಾವತಿ ದಿವಾಕರ್ ರಾವ್ ಪಡುಬಿದ್ರಿ, ಶ್ರೀಮತಿ ಲಲಿತಾಂಬಾ ವೈ.ಶಾಸ್ತ್ರಿ ಪಡುಬಿದ್ರಿ. ಗೌರವ ನಿರ್ದೇಶಕರು-ಶ್ರೀ ಸುಧಾಕರ್ ಬೆಳ್ಳೆ ಮುಂಡ್ಕೂರು, ಶ್ರೀಮತಿ ಲಲಿತಾ ಪ್ರಭಾಕರ್ ರಾವ್ ಎರ್ಮಾಳು.

ಯುವ ವೇದಿಕೆಯ ಅಧ್ಯಕ್ಷರಾಗಿ ಶ್ರೀ ಜನಾರ್ದನ ರಾವ್ ನಂದಿಕೂರು, ಕಾರ್ಯದರ್ಶಿಯಾಗಿ ಅರುಣ್ ರಾವ್ ಮುಂಡ್ಕೂರು ಆಯ್ಕೆಯಾದರು. ಮಹಿಳಾ ವೇದಿಕೆಯ ಅಧ್ಯಕ್ಷೆಯಾಗಿ ವೇದಾವತಿ ಲಕ್ಷ್ಮೀಕಾಂತ ರಾವ್ ಇನ್ನ, ಕಾರ್ಯದರ್ಶಿಯಾಗಿ ದೀಪಾ ಸುಧಾಕರ್ ಬೆಳ್ಳೆ ಮುಂಡ್ಕೂರು, ಸಂಚಾಲಕಿಯಾಗಿ ಶಶಿಕಲಾ ರಾಮ ರಾವ್ ಪಡುಬಿದ್ರಿ ಇವರು ಆಯ್ಕೆಯಾದರು.


ನಂತರ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಶೇ.90ಕ್ಕಿಂತ ಅಧಿಕ ಅಂಕ ಗಳಿಸಿದ ಕು। ಅಮೂಲ್ಯ, ಕು। ಸ್ವಾತಿ, ಕು। ಶರಣ್ಯ ಹಾಗೂ ಸನತ್ ಇವರನ್ನು ಶಾಲು ಹೊದಿಸಿ ಪುರಸ್ಕರಿಸಲಾಯಿತು. ಹಾಗೂ 17 ಜನ ವಿದ್ಯಾರ್ಥಿಗಳಿಗೆ ಒಟ್ಟು ರೂ.1,00,000/-ಗಳನ್ನು ಪ್ರೋತ್ಸಾಹಧನವಾಗಿ ವಿತರಿಸಲಾಯಿತು. ವೇದಿಕೆಯಲ್ಲಿ ಉಪಸ್ಥಿತರಿದ್ದ ಮಹನೀಯರು ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದರು. ಎಲ್ಲೂರು ಸುಬ್ಬರಾವ್ ಇವರು ಧನ್ಯವಾದವಿತ್ತರು. ಈ ಎಲ್ಲಾ ಕಾರ್ಯಕ್ರಮಗಳನ್ನು ಶ್ರೀಯುತ ಅರುಣ್‌ರಾವ್, ಶ್ರೀಮತಿ ಧರ್ಮಪ್ರಭಾ ಹಾಗೂ ಶ್ರೀಮತಿ ದುರ್ಗಾಶ್ರೀ ಇವರು ನಿರೂಪಿಸಿದರು. ಮಧ್ಯಾಹ್ನ ಪಾಕಪ್ರವೀಣ ಮುಂಡ್ಕೂರು ಶ್ರೀ ಯೋಗೀಶ್ ರಾವ್ ಇವರ ನೇತೃತ್ವದಲ್ಲಿ ನಾಲ್ನೂರು ಜನರಿಗೆ ಭೋಜನವನ್ನು ಉಣಬಡಿಸಲಾಯಿತು. ಬೆಳಗ್ಗಿನ ಉಪಹಾರವನ್ನು ವೈ.ಸುಬ್ಬರಾವ್ ಪ್ರಾಯೋಜಿಸಿದ್ದರು.

## ಪಾದೆಬೆಟ್ಟಿನಲ್ಲಿ ವಟುಗಳಿಗೆ ಉಪನ್ಯಾಸ



ಸ್ಥಾನಿಕ ಬ್ರಾಹ್ಮಣ ಸಂಘ, ಸುರತ್ಕಲ್‌ನ ವತಿಯಿಂದ ತಾ.08-05-2016ರಂದು ಪಾದೆಬೆಟ್ಟು ಶ್ರೀ ವಿಷ್ಣುಮೂರ್ತಿ ದೇವಸ್ಥಾನದಲ್ಲಿ ಜರಗಿದ ವೈದಿಕ ಶಿಬಿರದಲ್ಲಿ ಭಾಗವಹಿಸಿದ ವಟುಗಳಿಗೆ "ಸ್ಥಾನಿಕ ಬ್ರಾಹ್ಮಣರು ಅಂದು ಹಾಗೂ ಇಂದು" ಎಂಬ ವಿಷಯದ ಮೇಲೆ ಉಪನ್ಯಾಸವನ್ನು ಏರ್ಪಡಿಸಲಾಯಿತು. ಪುತ್ತೂರು ತಾಲೂಕಿನ ರಾಷ್ಟ್ರಪ್ರಶಸ್ತಿ ವಿಜೇತ ಶಿಕ್ಷಕಿ ಶ್ರೀಮತಿ ಸರೋಜಿನಿ ಈಶ್ವರಮಂಗಲ ಇವರು ಈ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ನಂತರ ಶ್ರೀ ಹರಿನಾರಾಯಣ ಶರ್ಮ, ಪಣಂಬೂರು ಇವರಿಂದ ಗಾಯತ್ರಿಮಂತ್ರದ ಮಹತ್ವದ ಬಗ್ಗೆ ಪ್ರವಚನವನ್ನೂ ಏರ್ಪಡಿಸಲಾಯಿತು. ಸ್ಥಾನಿಕ ಬ್ರಾಹ್ಮಣ ಸಂಘ, ಪಡುಬಿದ್ರೆ ಇವರೂ ಈ ಕಾರ್ಯಕ್ರಮದಲ್ಲಿ ಸಹಭಾಗಿಗಳಾಗಿದ್ದರು.

## ಅವನೀಂದ್ರನಾಥ್ ರಾವ್ ಅವರ 'ಸಂಸ್ಕೃತಿ ಸಂವೇದ' ಕೃತಿ ಬಿಡುಗಡೆ



ಲೇಖಕ ಮತ್ತು ಕೇಂದ್ರ ಸಚಿವಾಲಯ ಗ್ರಂಥಾಲಯದ ಹಿರಿಯ ಅಧಿಕಾರಿ ಡಾ. ವೈ. ಅವನೀಂದ್ರನಾಥ್ ರಾವ್ ಅವರ ''ಸಂಸ್ಕೃತಿ ಸಂವೇದ '' ವಿಮರ್ಶಾ ಕೃತಿ ಈಚೆಗೆ ದೆಹಲಿ ಕರ್ನಾಟಕ ಸಂಘದ ಆಶ್ರಯದಲ್ಲಿ ಬಿಡುಗಡೆಗೊಂಡಿತು. ಕೃತಿ ಬಿಡುಗಡೆಗೊಳಿಸಿ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಡಾ. ವೆಂಕಟಾಚಲ ಹೆಗಡೆ ಮಾತನಾಡಿದರು. ಸಾಹಿತ್ಯ ವಿಮರ್ಶೆಯಲ್ಲಿ ತೊಡಗಿಸಿಕೊಳ್ಳಲು ಒಂದು ಬಗೆಯ ಧ್ಯಾನಸ್ಥ ಮನಸ್ಸು ಇರಬೇಕು. ಅವನೀಂದ್ರರು ''ಮೊಯಿಲಿ ರಾಮಾಯಣ'' ಸೇರಿದಂತೆ ಕೆಲವು ಮಹತ್ವದ ಕೃತಿಗಳ ಕುರಿತು ಒಳನೋಟ ಹರಿಸಿದ್ದಾರೆ ಎಂದು ಅವರು ಅಭಿಪ್ರಾಯಪಟ್ಟರು. ಇಂಗ್ಲೆಂಡ್‌ನಲ್ಲಿರುವ ಭಾರತೀಯ ನೃತ್ಯ ಕಲಾವಿದೆ ಶ್ರೀಮತಿ ದೇವಿಕಾ ರಾವ್ ವಿಶೇಷ ಅತಿಥಿಯಾಗಿ ಭಾಗವಹಿಸಿದರು. ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ವಸಂತ ಶೆಟ್ಟಿ ಬೆಳ್ಳಾರೆ ಅಧ್ಯಕ್ಷತೆ ವಹಿಸಿದ್ದರು. ಡಾ. ಎಂ. ಎಸ್. ಶಶಿಕುಮಾರ್ ನಿರೂಪಿಸಿದರು. ಶ್ರೀಮತಿ ಜಮುನಾ ಮಠದ್ ವಂದಿಸಿದರು. ''ಸಂಸ್ಕೃತಿ ಸಂವೇದ'' ಕೃತಿಯನ್ನು ಬೆಂಗಳೂರಿನ ಸಪ್ನ ಬುಕ್ ಹೌಸ್ ಪ್ರಕಟಿಸಿದೆ

**With Best Compliments From :**



SMT. VIDYA & SRI K. VASUDEVA RAO

*Deepika Digital Studio & Video*
*Deepika International Travels*

WE UNDERTAKE

- Studio Portrait
- Digital Creation
- Outdoor Photography Making
- Digital Albums
- Video Coverage (Cinematography)
- Lamination & Frames
- Led Wall, Crane & Spot Mixing
- Air Ticket (Domestic & International)
- Passport Assistance
- Train Tickets
- Bus Tickets
- Attestation Certificate
- Western Union
- Emigration (ECNR)

Opp. Kediyoor Hotel, Near Service Bus Stand, Udupi - 576 101.
E-mail : deepika.tra@gmail.com
Ph : 0820-2520652 / 4295862 Mobile : 9845177795 / 9845650449

Owned & Published by : Sri Sthanika Dravida Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 0820-2520754
Edited by Dr.Y. Sudharshan Rao Udupi, Designed @ SriNidhi Computer Graphics, Rajataadri, Manipal, Printed at Agrahara Offsets, Udupi. E-mail : srisharadaudupi@gmail.com Website : www.srisharada.org